ಆಗಸ್ಟ್ 2019
ಸಂಪುಟ 15
ಸಂಚಿಕೆ 08

www.buntsanghablr.com

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
(A Charitable Institution)

# ಸ್ನೇಹ ಚಿಂತನೆ

ಮಾಸ ಪತ್ರಿಕೆ




ವಾರ್ಷಿಕ ಮಹಾಸಭೆ




ಸಮಾಜ ಸೇವಾ ವಿಭಾಗದಿಂದ ಕಲಿಕಾ ಸಾಮಾಗ್ರಿ ವಿತರಣೆ



ಶ್ರದ್ಧಾಂಜಲಿ

ಸಂಚಿಕೆ ಬೆಲೆ
ರೂ 1/-

324, Chord Road, Vijayanagara, Bengaluru - 560 040.
Ph: 080 2339 9323, 2339 9635, E: info@buntsanghablr.com


SEASONS GREETINGS
from
25 YEARS
Swathi
GROUP
Your Happiness is our Priority
We ensure to meet the needs of our guests by providing excellent facilities. Being the best business hotel in Bengaluru, Attide hotels blends comfort and luxury to give an unparalleled experience which makes our guests visit us again in there next trip.
Attide Boutique Hotel
Swathi Group of Restaurants
Swathi Caterers
#5, West of Chord Road, Rajaji Nagar, Bengaluru - 560086
9900013400 / 8023595555
sr24@swathigroup.co.in | catering@swathigroup.co.in | info24@swathigroup.co.in
swathigroup.co.in

ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 15** **AUGUST 2019** **ISSUE 08**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ :
**ಶ್ರೀ ಮುರಲೀಧರ ಹೆಗ್ಡೆ**

ಗೌ॥ ಸಂಪಾದಕರು :
**ಶ್ರೀಮತಿ ರಾಜಶ್ರೀ ಕೆ. ಶೆಟ್ಟಿ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎಸ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀ ಸುಧಾಕರ ಶೆಟ್ಟಿ, ಅಚ್ಲಾಡಿ**
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಶ್ರೀ ಸತೀಶ್ ಶೆಟ್ಟಿ, ವಕ್ವಾಡಿ**
**ಕುಮಾರಿ ಶಾಲ್ಮಲೀ ಸುರೇಶ್**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕಿ**

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು | 5 |
| 5. | From RAJ to SWARAJ | 9 |
| 6. | ಅಸ್ತಂಗತರಾದ ಹಿರಿಯ ಸಾಹಿತಿ ಡಾ॥ ಏರ್ಯ ಲಕ್ಷ್ಮೀನಾರಾಯಣ ಆಳ್ವ | 14 |
| 7. | ಪರಿವರ್ತನೆ ಜಗದ ನಿಯಮ | 16 |
| 8. | ಮನಃಪೂರ್ವಕ ನಮನಗಳು | 17 |
| 9. | A Friend You Can Bank Upon - Vijaya Bank | 19 |
| 10. | ಪರಿಶ್ರಮದಿಂದಲೇ ಪರಮ ಸಾಧನೆ | 21 |
| 11. | ಮಾನವೀಯ ಮೌಲ್ಯಗಳು ಎತ್ತ ಸಾಗುತ್ತಿವೆ ? | 22 |
| 12. | ಡಿ.ಎಮ್.ಐ.ಟಿ. ಎಂಬ ವೈಜ್ಞಾನಿಕ ವ್ಯಕ್ತಿತ್ವ ಜಾತಕ | 23 |
| 13. | ನಮ್ಮ ಮೊದಲ ಹೆಜ್ಜೆಯಲ್ಲೇ ಸಮಾಜದ ಋಣವಿದೆ – ಡಾ. ಶ್ರೀಧರ ಶೆಟ್ಟಿ | 29 |
| 14. | ವಿಶ್ವ ವಿಜ್ಞಾನಕ್ಕೆ ಭಾರತದ ಕೊಡುಗೆ | 30 |

**ಮುಖಪುಟ**

**ವಾರ್ಷಿಕ ಮಹಾಸಭೆ**
**ಸಮಾಜ ಸೇವಾ ವಿಭಾಗದಿಂದ ಕಲಿಕಾ ಸಾಮಗ್ರಿ ವಿತರಣೆ**
**ಶ್ರದ್ಧಾಂಜಲಿ ಡಾ॥ ಏರ್ಯ ಲಕ್ಷ್ಮೀನಾರಾಯಣ ಆಳ್ವ**

# ಸಂಪಾದಕೀಯ



## ನೆನಪಿರಲಿ..........

ಆಷಾಢ ಕಳೆದು ಶ್ರಾವಣ ಬಂತೆಂದರೆ ಹಬ್ಬಗಳ ಸಾಲು ಸಾಲು. ಭಕ್ತಿ ಭಾವದ ಪೂಜೆಯೊಂದಿಗೆ ಆಡಂಭರದ ಪ್ರದರ್ಶನಕ್ಕೊಂದು ವೇದಿಕೆಯೆನ್ನುವ ಪೈಪೋಟಿ ಕೆಲವರಿಗಾದರೆ, ಗಗನಕ್ಕೇರಿದ ಬೆಲೆಗಳಿಂದಾಗಿ ಸಾಲ-ಸೋಲ ಮಾಡಿ ಹಬ್ಬವನ್ನು ಸಂಭ್ರಮವಿಲ್ಲದೆ ಕಳೆಯುವ ಪಾಡು ಇನ್ನು ಕೆಲವರಿಗೆ. ಇತರರ ಸಂಭ್ರಮವನ್ನು ನೋಡಿ ಅನುಭವಿಸುವ ಮುಕ್ತ, ದಿನ ದಿನವೂ ಹಬ್ಬವೇ ಎನ್ನುವ ಸಂತೃಪ್ತ, ಕಾಯಕವೇ ಕೈಲಾಸವೆನ್ನುವ ನಿರ್ಲಿಪ್ತ ಹೀಗೆ ವೈವಿಧ್ಯಮಯ ಮನಸ್ಸುಗಳು. ಕಿರಿಯರಿಗೆ ಹೊಸತನದ ಸಂಭ್ರಮವಾದರೆ ಹಿರಿಯರಿಗೆ ಹಬ್ಬಗಳು ಹಳೆಯ ನೆನಪುಗಳನ್ನು ಮೊಗೆದಿಡುವ ನೆಪಗಳು.

"ನೆನಪು" ಎನ್ನುವ ಪದವೇ ಹಾಗೆ-ಕೇಳಿದರೇನೇ ನೆನಪುಗಳು ಪ್ರಾಜೆಕ್ಟರ್‌ನಲ್ಲಿ ಬೆಳಕಿಗೊಡ್ಡಿದ ಚಿತ್ರಗಳಂತೆ ಸಾಲು ಸಾಲಾಗಿ ಎದುರು ಬಂದು ನಿಲ್ಲುತ್ತವೆ. ಕವಿವಾಣಿಯಂತೆ "ನೆನಪು ಭೂತದ ರಿಂಗಣ...." ಯಾವ ಗೂಗಲ್ ಆ್ಯಪ್ ಇಲ್ಲದಿದ್ದಾಗಲೂ ನೆನಪಿನ ಚಿತ್ರಗಳು ಹೀಗೆಯೇ ಬಂದು ನಿಲ್ಲುತ್ತಿದ್ದವು. ಎಡಿಟಿಂಗ್, ಡಬ್ಬಿಂಗ್ ಎಲ್ಲ ಮನಃಪಟಲದಲ್ಲೇ ನಡೆಯುತ್ತಿತ್ತು. 'ಸವಿ ಸವಿ ನೆನಪು ಸಾವಿರ ನೆನಪು....' ಎಂದು ಬಾಲ್ಯದ ನೆನಪುಗಳನ್ನು ಹಾಡಿಕೊಂಡಾಡುವವರು ಹಲವರಾದರೆ ಮರೆಯಲೇಬೇಕೆನ್ನುವ ನೆನಪುಗಳು ಇನ್ನು ಕೆಲವರಿಗೆ. ನವಮಾಧ್ಯಮಗಳು ಪ್ರಭುತ್ವ ಬೀರಿದ ಮೇಲಂತೂ ನೆನಪಿನ ಬುತ್ತಿಯನ್ನು ಬಿಚ್ಚಿ ಹಂಚುವ ಸಂಭ್ರಮವೋ ಸಂಭ್ರಮ. ಮಳೆ ನೀರಲ್ಲಿ ತೇಲಿ ಬಿಟ್ಟ ಕಾಗದದ ದೋಣಿ, ದಾರ ಕಟ್ಟಿ ಆಟವಾಡಿಸಿದ ಹೆಲಿಕಾಪ್ಟರ್ ಚಿಟ್ಟೆ, ತೋಟದ ಹಣ್ಣು ಕದ್ದು ತಿಂದ ಏಟು ಎಲ್ಲವೂ ನೆನಪಿನ ಕಾವ್ಯಧಾರೆಗಳೇ. ಪ್ರೀತಿ ಪಾತ್ರರನ್ನು ಕಳಕೊಂಡವರಿಗೋ ನೆನಪು ಮಾತ್ರ ಸಂಗಾತಿ. ನೂರಕ್ಕೆ ನೂರು ಶೇಕಡಾ ಅಂಕಗಳ (ಉಬ್ಬರದ) ಈ ನವಯುಗದಲ್ಲಿ ನೆನಪೇ ಅಂಕ ವೀರರ ಶಕ್ತಿ ಸಾಧನ.

ಇಂದು, ನಾಳೆಗಳಲ್ಲಿ ಇಷ್ಟೊಂದು ಗಾಢವಾಗಿ ಆವರಿಸಿರುವ ನಿನ್ನೆಗಳು.... ಆ ನೆನಪುಗಳು ನಮ್ಮಿಂದ ದೂರಾದರೆ? ನೆನಪಿನ ಜಾಗವನ್ನು ಮರೆವು ಆಕ್ರಮಿಸಿದರೆ? ಹೌದು, ನೆನಪಿನ ಶಕ್ತಿಯನ್ನು ಕಳೆದುಕೊಳ್ಳುವಂತಹ ಆ ಸ್ಥಿತಿ, ಅದು ಎಷ್ಟೊಂದು ಭಯಾನಕ! ಕೆಲವೊಮ್ಮೆ ಅದು ತಾತ್ಕಾಲಿಕವಾದರೆ ಇನ್ನು ಕೆಲವು ಸಂದರ್ಭಗಳಲ್ಲಿ ಅದು ಕರುಣಾಜನಕ ದುರಂತ!

ಈಗ ಹೇಳಿದ್ದು ಮರುಕ್ಷಣ ಮರೆತು ಹೋಗುತ್ತದೆ, ಏನೋ ಮಾಡಬೇಕು ಅಂದವರು ಮತ್ತೇನನ್ನೋ ಮಾಡುತ್ತಾರೆ. ವಯಸ್ಸು ಏರುತ್ತದೆ, ಮನಸ್ಸು ಮರುಗುತ್ತದೆ. ಹೀಗೆ ಶುರುವಾಗುವ ಸಮಸ್ಯೆ ಡಿಮೆನ್ಶಿಯಾ. ಸ್ವಂತ ಮಕ್ಕಳನ್ನೇ ಗುರುತಿಸಲಾಗದ ಸ್ಥಿತಿ! ವಯಸ್ಸಾದ ಮೇಲೆ ಮರೆವು ಅಥವಾ ಬುದ್ಧಿಮಾಂದ್ಯತೆ ರೂಪದಲ್ಲಿ ಕಾಣಿಸಿಕೊಳ್ಳುವ ಇದು ಸಾಮಾನ್ಯ ಸಮಸ್ಯೆಯಾದರೂ ಹೆಚ್ಚುತ್ತಿರುವ ಪ್ರಮಾಣ ಆತಂಕ ಸೃಷ್ಟಿಸಿದೆ. ಪ್ರಸ್ತುತ ಭಾರತದಲ್ಲಿ ನಾಲ್ಕು ಮಿಲಿಯನ್‌ನಷ್ಟು ಜನರು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. 2030ರ ವೇಳೆಗೆ ಈ ಸಂಖ್ಯೆ ಸುಮಾರು 7 ಮಿಲಿಯನ್ ಮುಟ್ಟುವ ಸಾಧ್ಯತೆ ಇದೆ ಎಂದಿದೆ ಇತ್ತೀಚಿನ ವರದಿ.

ಧೂಮಪಾನ, ಮದ್ಯಪಾನವನ್ನು ತ್ಯಜಿಸುವುದು, ಸಾಕಷ್ಟು ದೈಹಿಕ ಚಟುವಟಿಕೆಯಿಂದಿದ್ದು, ದೇಹ ತೂಕವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು, ಆರೋಗ್ಯಕರ ಆಹಾರ ಮತ್ತು ಜೀವನ ಶೈಲಿ, ಹೊಸ ಹೊಸ ಹವ್ಯಾಸಗಳು, ಪದಬಂಧ, ಓದುವುದೇ ಮೊದಲಾದ ಚಟುವಟಿಕೆಗಳೊಂದಿಗೆ ಮನಸ್ಸನ್ನು ಚುರುಕಾಗಿಟ್ಟುಕೊಳ್ಳುವುದು, ಸಾಮಾಜಿಕ ಜೀವನದಲ್ಲಿ ಹೆಚ್ಚಿನ ತೊಡಗುವಿಕೆ ಮುಂತಾದವುಗಳಿಂದ ಈ ಕಾಯಿಲೆಯನ್ನು ದೂರವಿರಿಸಬಹುದು. ಹಿರಿಯರೊಂದಿಗೆ ಕುಟುಂಬದ ಸದಸ್ಯರು ಹೆಚ್ಚಿನ ಸಂವಹನವನ್ನು ನಡೆಸುವುದು ಇಲ್ಲಿ ಪರಿಣಾಮಕಾರಿ ಮಾತ್ರವಲ್ಲದೇ ಪ್ರಾಥಮಿಕ ಹಂತದಲ್ಲೇ ಕಾಯಿಲೆಯನ್ನು ಗುರುತಿಸುವಲ್ಲೂ ಸಹಕಾರಿಯಾಗಬಲ್ಲದು.

ನೆನಪು.... ಇರಲಿ ಕೊನೆತನಕ..........

**ಶ್ರೀಮತಿ ರಾಜಶ್ರೀ ಕೆ. ಶೆಟ್ಟಿ**

# ಅಧ್ಯಕ್ಷರ ಮಾತು



ಆತ್ಮೀಯ ಸದಸ್ಯರೇ,

ಸದಸ್ಯ ಬಾಂಧವರೆಲ್ಲರಿಗೂ 73ನೇ ಸ್ವಾತಂತ್ರ್ಯೋತ್ಸವ ಹಾಗೂ ಶ್ರೀ ಕೃಷ್ಣ ಜನ್ಮಾಷ್ಟಮಿಯ ಹಾರ್ದಿಕ ಶುಭಾಶಯಗಳು.

ದಿನಾಂಕ 28.07.2019 ರಂದು ನಡೆದ ವಿಶೇಷ ಸರ್ವಸದಸ್ಯರ ಸಭೆ ಹಾಗೂ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡು ತಮ್ಮ ಅಮೂಲ್ಯ ಸಲಹೆ-ಸೂಚನೆಗಳನ್ನಿತ್ತು ಸಹಕರಿಸಿದ ತಮಗೆಲ್ಲರಿಗೂ ಅನಂತಾನಂತ ವಂದನೆಗಳು.

ಸರ್ವಸದಸ್ಯರ ಅನುಮತಿಯಂತೆ, ಪುರುಷರಿಗಾಗಿ 'ಬಂಟ್ಸ್ ಹಾಸ್ಟೆಲ್' ಸ್ಥಾಪಿಸಲು ಟೆಂಡರ್ ಪ್ರಕ್ರಿಯೆ, ಪ್ರವೇಶಾತಿಗೆ ಪ್ರಚಾರ ಮೊದಲಾದ ಪ್ರಕ್ರಿಯೆಗಳು ಈಗಾಗಲೇ ಪ್ರಾರಂಭಿಸಲಾಗಿದ್ದು, ಅಕ್ಟೋಬರ್ ಮೊದಲ ವಾರದಲ್ಲಿ ಹಾಸ್ಟೆಲ್ ಆರಂಭಿಸಲು ಉದ್ದೇಶಿಸಲಾಗಿದೆ.

ಸಮುದಾಯ ಕಂಡ ಮಹಾನ್ ವ್ಯಕ್ತಿ ಮುಲ್ಕಿ ಸುಂದರ ರಾಂ ಶೆಟ್ಟಿಯವರ ಸ್ಮರಣಾರ್ಥ ಮುಲ್ಕಿ ಸುಂದರ ರಾಂ ಶೆಟ್ಟಿ ಸ್ಮಾರಕ ಚಾರಿಟೇಬಲ್ ಟ್ರಸ್ಟ್‌ನ ನೇತೃತ್ವದಲ್ಲಿ ಅವರ ಹುಟ್ಟೂರು ಮುಲ್ಕಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಸಭಾಭವನಕ್ಕೆ ಸಂಘದ ವತಿಯಿಂದ ಒಂದು ಕೋಟಿ ರೂಪಾಯಿಗಳ ದೇಣಿಗೆ ನೀಡಲು ಮಹಾಸಭೆಯಲ್ಲಿ ಅನುಮತಿ ದೊರೆತಿದೆ. ಈ ಕಾರ್ಯಕ್ಕೆ ಸಂಘದ ಸದಸ್ಯರಾದ ತಮ್ಮೆಲ್ಲರ ತನು, ಮನ, ಧನದ ಸಹಕಾರ ಖಂಡಿತಾ ಅಗತ್ಯವಿದೆ. ಸಹೃದಯ ಬಂಧುಗಳೆಲ್ಲರೂ ದೇಣಿಗೆಯನ್ನು ನೀಡಿ ಈ ಯೋಜನೆಯ ಯಶಸ್ಸಿಗೆ ಕೈಜೋಡಿಸಬೇಕಾಗಿ ವಿನಂತಿ.

**ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ**

ಪೋಲೀಸ್ ಇಲಾಖೆ ಸೇರಲು ಹಾಗೂ ಇನ್ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಉಚಿತ ತರಬೇತಿಯನ್ನು ಸಂಘದ ಮಾನವ ಸಂಪನ್ಮೂಲ ಮತ್ತು ಉದ್ಯೋಗ ಸಮಿತಿ ಹಾಗೂ ಯುವ ವಿಭಾಗ ಸಮಿತಿಯ ವತಿಯಿಂದ ಆಯೋಜಿಸಿದ್ದು, ಸದಸ್ಯ ಬಾಂಧವರು ತಮ್ಮ ಮಕ್ಕಳು ಅಥವಾ ಕುಟುಂಬದಲ್ಲಿರುವ ಆಸಕ್ತ ಅಭ್ಯರ್ಥಿಗಳನ್ನು ಈ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರೇರೇಪಿಸಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಗೆ ಸಂಘದ ವೆಬ್‌ಸೈಟ್ (www.buntsanghablr.com) ಅಥವಾ ಸಂಘದ ಕಛೇರಿಯನ್ನು (080-23399635/ 23399323) ಸಂಪರ್ಕಿಸಲು ಕೋರಲಾಗಿದೆ.

**ವಿಷನ್ 2020-40 :**

ಮುಂದಿನ 20 ವರ್ಷಗಳಲ್ಲಿ ಬಂಟರ ಸಂಘದ ಕಾರ್ಯಚಟುವಟಿಕೆಗಳು ಹಾಗೂ ಕೈಗೆತ್ತಿಕೊಳ್ಳಬೇಕಾದ ಕಾರ್ಯಯೋಜನೆಗಳ ಬಗ್ಗೆ ರೂಪು-ರೇಷೆಗಳನ್ನು ಸಿದ್ಧಪಡಿಸಲು ಪರಿಣಿತರ ಸಮಿತಿಯನ್ನು ನೇಮಕ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ. ಈ ಬಗ್ಗೆ ಶೀಘ್ರವಾಗಿ ವಿಶೇಷ ಸರ್ವ ಸದಸ್ಯರ ಸಭೆ ಕರೆದು ಸದಸ್ಯ ಬಾಂಧವರ ಸಲಹೆ-ಸೂಚನೆ ಹಾಗೂ ಅನುಮತಿಯೊಂದಿಗೆ ಮುಂದುವರಿಯಲಾಗುವುದು.

ಬಂಟ ಸಮುದಾಯದ ಹೆಮ್ಮೆಯ ಹಿರಿಯ ಸಾಹಿತಿ, ಸಾಮಾಜಿಕ ಚಿಂತಕ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರವರು ನಮ್ಮನ್ನು ಅಗಲಿರುತ್ತಾರೆ. ಮಂಗಳೂರಿನಲ್ಲಿರುವ ಬಂಟರ ಮಾತೃ ಸಂಘದ ಅಧ್ಯಕ್ಷರಾಗಿಯೂ ಏರ್ಯರು ತಮ್ಮ ಅಮೂಲ್ಯ ಸೇವೆ ಸಲ್ಲಿಸಿರುತ್ತಾರೆ. 2017 ರಲ್ಲಿ ಬೆಂಗಳೂರು ಬಂಟರ ಸಂಘದಲ್ಲಿ ಲೋಕಾರ್ಪಣೆಗೊಂಡ ಏರ್ಯರ 'ಹಿಂದಣ ಹೆಜ್ಜೆ' ಕೃತಿ ನನಗೆ ಅತ್ಯಂತ ಸ್ಫೂರ್ತಿಯಾಗಿದ್ದು, ಬಂಟ ಸಮುದಾಯದ ಹಿಂದಣ ಹೆಜ್ಜೆಯ ಗುರುತುಗಳನ್ನು ಹಾಗೂ ಇತಿಹಾಸದ ಮಹತ್ವದ ವಿಷಯಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಈ ಕೃತಿಯಲ್ಲಿ ನಿರೂಪಿಸಿರುತ್ತಾರೆ. ಓರ್ವ ವಿಮರ್ಶಕ, ಸಂಶೋಧಕ, ಸಾಹಿತಿಯಾಗಿ ಹಲವಾರು ಕೃತಿಗಳನ್ನು ರಚಿಸಿರುವ ಏರ್ಯರು ತಮ್ಮ ಹೆಚ್ಚಿನ ಕೃತಿಗಳಲ್ಲಿ ಅವಿಭಜಿತ ದಕ್ಷಿಣ ಕನ್ನಡ ಹಾಗೂ ಬಂಟ ಸಮುದಾಯದ ಸಂಸ್ಕೃತಿ ಹಾಗೂ ಸಂಪ್ರದಾಯಗಳನ್ನು ಬಿಂಬಿಸಿರುತ್ತಾರೆ. 1959 ರಲ್ಲಿ ಪ್ರಕಟಗೊಂಡ 'ರಾಮಾಶ್ವಮೇಧ ತರಂಗಗಳು' ಪುಸ್ತಕವನ್ನು ಮದ್ರಾಸ್ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಠ್ಯಪುಸ್ತಕವನ್ನಾಗಿ ಅಳವಡಿಸಿಕೊಳ್ಳಲಾಗಿತ್ತು.

ಬಂಟ ಸಮುದಾಯದ ಹಿರಿಯ ಚೇತನ, ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರವರ ನಿಧನ ಸಾಹಿತ್ಯ ಲೋಕಕ್ಕೆ ಹಾಗೂ ಬಂಟ ಸಮುದಾಯಕ್ಕೆ ತುಂಬಲಾರದ ನಷ್ಟ. ಅಗಲಿದ ಹಿರಿಯರಿಗೆ ಬಂಟ ಸಮುದಾಯ ಹಾಗೂ ಬಂಟರ ಸಂಘದ ಸಮಸ್ತ ಸದಸ್ಯರ ಪರವಾಗಿ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ಆರ್. ಉಪೇಂದ್ರ ಶೆಟ್ಟಿ
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



"ಸಮುದ್ರ ಗಹನದಲ್ಲಿ ಹಡಗಿದೆ, 'ಹಾಯಿ' ಮತ್ತು 'ಹರಿಗೋಲು' ಎಂಬ ಎರಡು ಸಾಧನಗಳು. ಬರೀ ಹಾಯಿಯನ್ನೇ ನಂಬಿದರೆ ಹಡಗು ಗಾಳ ಬಂದೆಡೆ ನಡೆಯುವುದೇ ಹೊರತು, ನಮಗೆ ಬೇಕಾದ ಗಮ್ಯ ಸ್ಥಾನಕ್ಕೆ ಸೇರಲಾಗದು. ಹಾಯಿಯಿಂದ ಬಲ ಪಡೆದು, ಹರಿಗೋಲಿನಿಂದ ಮೀಟಿದರೆ ಮಾತ್ರ ಫಲ ಪ್ರಾಪ್ತಿ. ಒಂದು ದೃಶ್ಯ ಇನ್ನೊಂದು ಅದೃಶ್ಯ.

ನಮ್ಮ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ, ಅರ್ಥಪೂರ್ಣ ಚರ್ಚೆಯನ್ನು, ಆರೋಗ್ಯ ಪೂರ್ಣ ಚಿಂತನೆಯನ್ನು ಮಂಡಿಸಿದ ಸರ್ವ ಸದಸ್ಯರಿಗೆ ಗೌರವದ ನಮನಗಳು. ತಮ್ಮೆಲ್ಲರ ಭಾಗವಹಿಸುವಿಕೆಯಿಂದ ಆಡಳಿತ ಮಂಡಳಿಗೆ ಶಕ್ತಿ ಬಂದಿದೆ, ಧೀಮಂತ ಸದಸ್ಯರ ಪ್ರವೇಶವಾಗಿದೆ, ಸಂಘದ ಪಥದಲ್ಲಿ ಹೊಸ ಯೋಜನೆಗಳನ್ನು, ತಿರುವುಗಳನ್ನು ಕಾಣುವ ಕಾಯಕಕ್ಕೆ ಚಾಲನೆ ದೊರೆತಿದೆ. ಸಂಘದ ಪ್ರಗತಿಯ ಕಾರ್ಯಚಟುವಟಿಕೆ ವಿಸ್ತಾರದ ಬಿರುಸಿನತ್ತ ಸಾಗುತ್ತಿದೆ.

ಮೊನ್ನೆ ನಡೆದಂತಹ ವಿಶೇಷ ಸಭೆಯಲ್ಲಿ ವಿಶೇಷವಾದ ತೀರ್ಮಾನವನ್ನು ಸಭೆ ತೆಗೆದುಕೊಂಡಿತು. ಬಹುದಿನಗಳ ಬೇಡಿಕೆಯ ನಿರೀಕ್ಷೆಯಲ್ಲಿದ್ದಂತಹ **"Bunts Boys Hostel"** ಪ್ರಾರಂಭಿಸುವ ಬಗ್ಗೆ ಅನುಮತಿಯ ಅಂಕಿತ ಬಿದ್ದಿತು. ಬಂಟರ ಸಂಘದ ಸನಿಹದಲ್ಲಿ ಅತ್ತಿಗುಪ್ಪೆ ಮೆಟ್ರೋ ನಿಲ್ದಾಣದ ಕೂಗಳತೆಯ ದೂರದಲ್ಲಿ ನಾವು ನಿರೀಕ್ಷಿಸಿದ ರೀತಿಯಲ್ಲಿ ಬಾಡಿಗೆಗೆ ಕಟ್ಟಡ ಲಭ್ಯವಾಗಿದೆ. ಸುಮಾರು 120 ಜನ ವಿದ್ಯಾರ್ಥಿಗಳು/ ಹುಡುಗರು ಇಲ್ಲಿ ವಾಸಿಸಲು ಯೋಗ್ಯವಾಗಿದೆ.

ಇದರ ನಕ್ಷೆ ಹಾಗೂ ಕಾರ್ಯದ ಅಭಿವೃದ್ಧಿಯ ಬಗ್ಗೆ ತಯಾರಿ ನಡೆಯುತ್ತಿದೆ. ಎರಡು ತಿಂಗಳ ಅವಧಿಯಲ್ಲಿ ಕೆಲಸವನ್ನು ಸಂಪೂರ್ಣಗೊಳಿಸಿ ಹಾಸ್ಟೆಲನ್ನು ಪ್ರಾರಂಭಗೊಳಿಸುವುದು ನಮ್ಮೆಲ್ಲರ ಹೊಣೆಗಾರಿಕೆ. ಒಂದಷ್ಟು ದಾನಿಗಳ ಸಹಕಾರದೊಂದಿಗೆ, ಎಲ್ಲಾ ಸದಸ್ಯರ ಬೆಂಬಲದೊಂದಿಗೆ ಅದನ್ನು ಸಿದ್ಧಿಸುವುದು ನಮ್ಮೆಲ್ಲರ ಸವಾಲು.

ಯಲಚಗುಪ್ಪೆಯಲ್ಲಿ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ-II ಇದರ ಕೆಲಸವು ಬಹಳ ತ್ವರಿತಗತಿಯಲ್ಲಿ ಹಾಗೂ ಉನ್ನತ ಗುಣಮಟ್ಟದ ಕೆಲಸವಾಗುತ್ತಿದ್ದುದು ಸಂತಸದ ಸಂಕೇತ. ಮುಂದಿನ ಶೈಕ್ಷಣಿಕ ವರ್ಷದಿಂದ ಅಲ್ಲಿ ಒಂದಷ್ಟು ವಿಭಾಗದ ವಿದ್ಯಾರ್ಥಿಗಳು ವಿದ್ಯಾರ್ಜನೆಯನ್ನು ಪ್ರಾರಂಭಿಸುವುದರ ಮೂಲಕ, ಅದೊಂದು ದೊಡ್ಡ ವಿದ್ಯಾ ಕಾಶಿಯಾಗಬೇಕು ಎನ್ನುವುದು ನಮ್ಮೆಲ್ಲರ ಮಹದಾಸೆ.

ವಿಶೇಷ ಸಭೆ ಹಾಗೂ ಮಹಾ ಸಭೆಯನ್ನು ನಿರ್ವಿಘ್ನವಾಗಿ, ಸುಸೂತ್ರವಾಗಿ ನಡೆಸಿಕೊಟ್ಟ ನಮ್ಮೆಲ್ಲ ನಲ್ಮೆಯ ಸದಸ್ಯರ ಸಹಕಾರವನ್ನು ನೆನೆಯುತ್ತಾ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಸದಾಕಾಲ ತಾವು ಬಣ್ಣ ಮತ್ತು ಭಾವವನ್ನು ತುಂಬುವಿರಾಗಿ ಆಶಿಸುತ್ತಾ,

ವಂದನೆಗಳೊಂದಿಗೆ,

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು

ಹಬ್ಬಗಳು, ಆಚರಣೆಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು – ಕೃಷಿ ಪ್ರಧಾನವಾದ ಬಂಟ ಸಮಾಜದ ಎಲ್ಲಾ ಆಚರಣೆಗಳೂ, ಹಬ್ಬಗಳೂ ಕೃಷಿಗೆ ಸಂಬಂಧಪಟ್ಟವುಗಳೇ ಆಗಿವೆ. ಹಿಂದೆ ಕೂಡು ಕುಟುಂಬಗಳಿದ್ದ ಕಾಲದಲ್ಲಿ ಅತ್ಯಂತ ಸಾಂಪ್ರದಾಯಿಕವಾಗಿ ಆಚರಿಸಲ್ಪಡುತ್ತಿದ್ದ ಹಬ್ಬಗಳ ಸಡಗರ, ಸಂಭ್ರಮ ಕ್ರಮೇಣ ಕ್ಷೀಣಿಸುತ್ತಿದ್ದು ಕೃಷಿಯಂತೆಯೇ ಮರೆಯಾಗುತ್ತಿದೆಯೇನೋ ಎನ್ನುವ ಆತಂಕವಿದೆ. ಹಿರಿಯರಿಗೆ ಗತವೈಭವವನ್ನು ನೆನಪಿಸಿಕೊಳ್ಳಲು ಮತ್ತು ನವಪೀಳಿಗೆಗೆ ನಮ್ಮ ಆಚರಣೆಗಳ ವೈಶಿಷ್ಟ್ಯದ ಸೊಬಗನ್ನು ಮನದಟ್ಟು ಮಾಡುವುದಕ್ಕಾಗಿ ಈ ಅಂಕಣ. ಪ್ರಾದೇಶಿಕ ಹಾಗೂ ಭಾಷಿಕ ಭಿನ್ನತೆಗಳು ಆಚರಣೆಗಳಲ್ಲೂ ಪ್ರತಿಫಲಿಸುತ್ತವಾದ್ದರಿಂದ ಇಲ್ಲಿ ತುಳುನಾಡಿನ ದಕ್ಷಿಣ ಹಾಗೂ ಉತ್ತರ ಭಾಗಗಳ ಸಂಪ್ರದಾಯಗಳನ್ನು ಬೇರೆ ಬೇರೆಯಾಗಿ ಚಿತ್ರಿಸಲಾಗಿದೆ.

**– ಸಂಪಾದಕಿ**

## ಸ್ವೋಣೆ ತಿಂಗ್ಳು (ಸೋಣ ತಿಂಗಳು)

ಸಿಂಹ ಸಂಕ್ರಮಣದಿಂದ ಕನ್ಯಾ ಸಂಕ್ರಮಣದವರೆಗೆ ಸೋಣೆ ತಿಂಗಳು. ಸೋಣೆ ತಿಂಗಳು ಬಂತೆಂದರೆ ಕರಾವಳಿ ಜನರಿಗೆ ಕತ್ತಲೆ ಕಳೆದು ಬೆಳಕು ಹರಿದಂತೆ ಅನುಭವ. ಮಳೆ ಕಡಿಮೆಯಾಗಿ ಆಷಾಡದ ಜಡತ್ವ ದೂರಾಗಿ, ಜನರಲ್ಲಿ ಹೊಸ ಉಲ್ಲಾಸ ಮೂಡುವ ಸಮಯ. ಹಸಿರನುಟ್ಟು ಪ್ರಕೃತಿ ಮಾತೆ ಬಣ್ಣ ಬಣ್ಣದ ಹೂಗಳೊಂದಿಗೆ ಮದುಮಗಳಂತೆ ಕಂಗೊಳಿಸುತ್ತಿರುತ್ತಾಳೆ. ಹಾಗೆಯೇ ಎಂದೂ ಮನೆಯಿಂದ ಹೊರಗೆ ಬಾರದ ಹಳ್ಳಿಯ ಮಹಿಳೆಯರೂ ಕೂಡ ಚೆನ್ನಾಗಿ ಅಲಂಕರಿಸಿಕೊಂಡು ದೇವಾಲಯಗಳಿಗೆ ಹೊರಡುತ್ತಾರೆ, ಹಾಗೂ ತನ್ನ ಪತಿಯ ಶ್ರೇಯಸ್ಸಿಗಾಗಿ ಸೋಣೆ ತಿಂಗಳಿನ ಶುಕ್ರವಾರ ವ್ರತವನ್ನಾಚರಿಸುತ್ತಾರೆ.

ಹಿಂದೆ ಸೋಣೆ ತಿಂಗಳಿನಲ್ಲಿ ಬಳೆಗಾರರು ಮನೆ-ಮನೆಗೆ ಬಂದು ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗೆ ಬಳೆ ತೊಡಿಸಿ ಹೋಗುವ ಸಂಪ್ರದಾಯವಿತ್ತು. ವಾದ್ಯ ನುಡಿಸುವ ಸಮುದಾಯದವರು ಕೂಡ ಮನೆ-ಮನೆಗೆ ಬಂದು ಸುಮಧುರವಾಗಿ ವಾದ್ಯ ನುಡಿಸಿ ಮನೆಗೆ ಶುಭ ಹಾರೈಸುತ್ತಿದ್ದರು. ಬಳೆಗಾರರು ಮತ್ತು ವಾದ್ಯದವರಿಗೆ ಹಣದ ಜೊತೆ ಗೌರವದ ಸಂಕೇತವಾಗಿ ಅಕ್ಕಿ ಮತ್ತು ತೆಂಗಿನಕಾಯಿಯನ್ನು ನೀಡಲಾಗುತ್ತಿತ್ತು. ಅಂತೆಯೇ ಡೋಲು ಬಾರಿಸುವ ಹಿಂದುಳಿದ ವರ್ಗದವರು ಪ್ರತಿಯೊಂದು ಹಬ್ಬ-ಜಾತ್ರೆಗಳಿಗೂ ಮುಂಚಿತವಾಗಿ ಬಂದು ಮನೆ ಮುಂದೆ ಡೋಲು ಬಾರಿಸಿ ಹಬ್ಬವನ್ನು ನೆನಪಿಸುವುದು ಮಾಮೂಲಾಗಿತ್ತು.

ಕುಂದಾಪುರದ ಕಡೆಯಲ್ಲಿ ಸೋಣೆ ತಿಂಗಳಿನ ಸಂಕ್ರಮಣದಿಂದ ಹೊಸ್ತಿಲು ಪೂಜೆ ಪ್ರಾರಂಭ ಮಾಡುತ್ತಾರೆ. ಬೆಳಿಗ್ಗೆ ಮನೆಯ ಗೃಹಿಣಿ ಅಥವಾ ಹೆಣ್ಣು ಮಕ್ಕಳು ಸ್ನಾನ ಮಾಡಿ, ಮನೆ ಸ್ವಚ್ಛ ಮಾಡಿ ಮುಂಭಾಗದ ಹೊಸ್ತಿಲನ್ನು ತೊಳೆದು, ಹೊಸ್ತಿಲಿನ ಹೊರಭಾಗದಲ್ಲಿ ನಿಂತು, ಹೊಸ್ತಿಲಿಗೆ ಸೇಡಿಯಿಂದ (ಜೇಡಿಮಣ್ಣು) ಗೆರೆ (ಚಿತ್ರ) ಬರೆದು ಸೋಣೆ ಹೂ (ಗದ್ದೆಯ ಅಂಚಿನಲ್ಲಿ ಬೆಳೆಯುವ ಗುಲಾಬಿ ಬಣ್ಣದ ಹೂ) ಮತ್ತು ಕೊಳ್ಳ್ ಹೂ (ಅಂಗಳದಲ್ಲಿ ಹುರುಳಿಯನ್ನು ಮಣ್ಣಿನಲ್ಲಿ ಬಿತ್ತಿ, ನೀರು ಚಿಮುಕಿಸಿ, ಒಂದು ಮಡಕೆಯನ್ನು ಅದರ ಮೇಲೆ ಬೋರಲಾಗಿ ಇಟ್ಟು 4 ದಿನದ ನಂತರ ಅದರಿಂದ ಬರುವ ಧಾನ್ಯದ ಸಸಿ)ವನ್ನು ಇಟ್ಟು ಅರಿಶಿನ ಕುಂಕುಮ ಹಚ್ಚಿ, ಧೂಪ ದೀಪದ ಆರತಿ ಮಾಡಿ ಹೊಸ್ತಿಲಿಗೆ ನಮಸ್ಕರಿಸುತ್ತಾರೆ ಮತ್ತು ಸಂಜೆ ಪುನಃ ಹೊಸ್ತಿಲಿಗೆ ದೀಪ ಇಟ್ಟು ನಮಸ್ಕರಿಸುತ್ತಾರೆ. ಈ ಹೊಸ್ತಿಲ ಪೂಜೆಯ ಮುಕ್ತಾಯದ ಹಂತದಲ್ಲಿ "ಅಜ್ಜಿ" ಎನ್ನುವ ಒಂದು ವಿಭಿನ್ನ ಸಂಪ್ರದಾಯ ನಡೆಸಲಾಗುತ್ತದೆ.

**ಹೊಸ್‌ಲಜ್ಜಿ (ಹೊಸ್ತಿಲಜ್ಜಿ):** ಅಜ್ಜಿ ಆಚರಣೆಯ ದಿನ ರಾತ್ರಿ ಹೊಸ್ತಿಲಿನ ಪೂಜೆ ಮಾಡುವವರು (ಅಜ್ಜಿ) ಹೊಸ್ತಿಲಿನ ಒಳ ಭಾಗದಲ್ಲಿ ನಿಂತು ಪೂಜೆ ಮಾಡಬೇಕು. ಉದ್ದಿನ ದೋಸೆ, ಬೇಯಿಸಿದ ಧಾನ್ಯ, ಉಂಡಳ್ಕ (ಅಕ್ಕಿ, ತೆಂಗಿನಕಾಯಿ ಮತು ಅರಿಶಿನ ಹಾಕಿ ಕಡೆದ ಗಟ್ಟಿ

ಬಂದವನ್ನು ಉಂಡೆ ಮಾಡಿ ಎಣ್ಣೆಯಲ್ಲಿ ಕರಿಯುವುದು) ದಂತಹ ವಿಶೇಷ ಖಾದ್ಯವನ್ನು ನೈವೇದ್ಯ ರೂಪದಲ್ಲಿ ಹೊಸ್ತಿಲಿಗೆ ಬಡಿಸಿ, ತಾಂಬೂಲ ಮತ್ತು ಹೂಗಳನ್ನಿಟ್ಟು ಶ್ರೀಗಂಧ, ಅರಶಿನ, ಕುಂಕುಮ ಹಚ್ಚಿ ಧೂಪ ದೀಪಗಳೊಡನೆ ತೆಂಗಿನಕಾಯಿ ಒಡೆದು ನಮಸ್ಕರಿಸುತ್ತಾರೆ. ಹೀಗೆ ಲಕ್ಷ್ಮೀ ಸ್ವರೂಪಳಾದ ಅಜ್ಜಿಯನ್ನು ಮನೆಯಿಂದ ಬೀಳ್ಕೊಡುತ್ತಾರೆ. ಇದನ್ನು "ಅಜ್ಜಿ ಓಡಿಸುವುದು" ಎಂದು ತಮಾಷೆಗಾಗಿ ಹೇಳುತ್ತಾರೆ. ನಂತರ ಉದ್ದಿನ ದೋಸೆ, ಕೋಳಿ ಪದಾರ್ಥದೊಂದಿಗೆ ಅಗಲಿದ ಹಿರಿಯರಿಗೆ "ಮಿಸಾಲ್" ಇಟ್ಟು ಊಟ ಮಾಡುತ್ತಾರೆ.

**ಸೋಣೆ ಆರ್ತಿ:** (ಸೋಣೆ ಆರತಿ) ಸೋಣೆ ತಿಂಗಳಿನಲ್ಲಿ ಹಳ್ಳಿಯ ದೇವಸ್ಥಾನಗಳಲ್ಲಿ ಪ್ರತಿದಿನವು ಸೋಣೆ ಆರತಿ ಎನ್ನುವ ವಿಶೇಷ ಪೂಜೆ ನಡೆಯುತ್ತದೆ. ಎಲ್ಲಾ ಮನೆಯವರೂ ಸರದಿ ಪ್ರಕಾರ ಸೋಣೆ ಆರತಿಯ ಸೇವೆ ಸಲ್ಲಿಸುತ್ತಾರೆ. ಕತ್ತಲಾಗುತ್ತಿದ್ದಂತೆಯೇ ದೇವಸ್ಥಾನಗಳಲ್ಲಿ ಸೋಣೆ ಆರತಿಯ ಸಡಗರ. ದೇವರನ್ನು ಹೂಗಳಿಂದ ಅಲಂಕರಿಸಿ, ಪಂಚಕಜ್ಜಾಯ, ನೈವೇದ್ಯ ಮಾಡಿ ಅರ್ಚಕರು ಮರದ ಚಿಕ್ಕ ಆರತಿಯಿಂದ ಹಿಡಿದು ದೊಡ್ಡ-ದೊಡ್ಡ ಆರತಿಯಲ್ಲಿ ಸಾಲು-ಸಾಲು (ಸಾಲಂಕೃತ) ಆರತಿಯನ್ನು ಬೆಳಗುತ್ತಾರೆ. ಗಂಟೆ-ಜಾಗಂಟೆ, ಶಂಖ ನಿನಾದ ಮತ್ತು ಮಂತ್ರ ಘೋಷದೊಂದಿಗೆ ಈ ಸೋಣೆ ಆರತಿಯನ್ನು ನೋಡುವಾಗ ನಿಜವಾಗಿಯೂ ಮನಸ್ಸು ಮಂತ್ರ-ಮುಗ್ಧವಾಗುತ್ತದೆ. ಸೋಣೆ ಆರತಿ ನೋಡಿದರೆ ಮಾಡಿದ ಮತ್ತು ನೋಡಿದ ಪಾಪ ಪರಿಹಾರವಾಗುತ್ತದೆ ಎನ್ನುವುದು ನಂಬಿಕೆ.

**ನಾಗರ ಪಂಚಮಿ :** ಹೊಸ ವರ್ಷದಲ್ಲಿ ಬರುವ ಸಾಲು-ಸಾಲು ಹಬ್ಬಗಳಿಗೆ ಮುನ್ನುಡಿ ಬರೆಯುವ ಹಬ್ಬವೇ ನಾಗರ ಪಂಚಮಿ. ಪರಶುರಾಮ ಸೃಷ್ಟಿ ಕರಾವಳಿಯಲ್ಲಿ ನಾಗದೇವತೆಗೆ ವಿಶೇಷವಾದ ಸ್ಥಾನ- ಮಾನವಿದೆ. ಶ್ರಾವಣ ಮಾಸದ ಶುಕ್ಲ ಪಕ್ಷದ ಪಂಚಮಿಯ ದಿನ ನಾಗರ ಪಂಚಮಿಯನ್ನು ಆಚರಿಸುತ್ತಾರೆ. ತಮ್ಮ ಹಿರಿಯರು ತಲೆ-ತಲಾಂತರಗಳಿಂದ ಪೂಜಿಸಿದ ನಾಗ-ಬನಕ್ಕೆ ಹೋಗಿ ಪೂಜೆ ಸಲ್ಲಿಸುವುದು ವಾಡಿಕೆ. ನಮ್ಮಲ್ಲಿ ಮಾತೃ ಪ್ರಧಾನ ಕುಟುಂಬವಾಗಿರುವುದರಿಂದ ಹೆಚ್ಚಾಗಿ ಎಲ್ಲರೂ ಅವರವರ ತವರೂರಿನ ಮೂಲ ನಾಗ-ಬನಕ್ಕೆ ತೆರಳಿ ಶ್ರದ್ಧಾ ಭಕ್ತಿಯಿಂದ ಹಾಲು-ಸೀಯಾಳಗಳಿಂದ ನಾಗನ ಕಲ್ಲಿಗೆ ಅಭಿಷೇಕ ಮಾಡಿ, ತನು-ತಂಬಿಲಗಳ ಸೇವೆ ಕೊಟ್ಟು ನಾಗದೇವರ ಕೃಪೆಗೆ ಪಾತ್ರರಾಗುತ್ತಾರೆ. ಅರಶಿನದ ಎಲೆಯಿಂದ ತಯಾರಿಸಿದ ಹಿಟ್ಟು "ಗೊಡ್ಡ್ ಹಿಟ್" ನಾಗರ ಪಂಚಮಿಯ ವಿಶೇಷ ತಿಂಡಿ.

**ಅಷ್ಟಮಿ :** ಶ್ರಾವಣದ ಕೃಷ್ಣ ಪಕ್ಷದ 8ನೇ ದಿನವನ್ನು ಕೃಷ್ಣ ಜನ್ಮಾಷ್ಟಮಿಯಾಗಿ ಆಚರಿಸಲಾಗುತ್ತದೆ. ಕೃಷ್ಣನ ನಾಡು ಉಡುಪಿಯಲ್ಲಿ ಅಷ್ಟಮಿಯನ್ನು ವೈಭವದಿಂದ ಆಚರಿಸುತ್ತಾರೆ. ಮರುದಿನ ವಿಟ್ಲ್ ಪಿಂಡಿ (ಮೊಸರು ಕುಡಿಕೆ) ಹಬ್ಬ ಅಂದರೆ ಕೃಷ್ಣ ಲೀಲೋತ್ಸವ ಕೂಡ ಇರುತ್ತದೆ. ಅಷ್ಟಮಿಯ ದಿನ ಮನೆಗಳಲ್ಲಿ ಶ್ರೀ ಕೃಷ್ಣನಿಗೆ ಹೂ, ಹಣ್ಣುಗಳನ್ನಿಟ್ಟು ವಿಶೇಷ ಪೂಜೆ ಸಲ್ಲಿಸುತ್ತಾರೆ. ಅವಲಕ್ಕಿ ಪಂಚಕಜ್ಜಾಯದ ನೈವೇದ್ಯ ಮಾಡುತ್ತಾರೆ ಮತ್ತು ಸಂಜೆ ನೀರು ದೋಸೆ ಮತ್ತು ಬೆಲ್ಲ ಹಾಕಿದ ತೆಂಗಿನ ಕಾಯಿ ಹಾಲು (ರಸಾಯನ) ಮಾಡುತ್ತಾರೆ. ಅಷ್ಟಮಿಯ ವ್ರತ ಮಾಡುವವರು ಉಪವಾಸವಿದ್ದು ರಾತ್ರಿ ಚಂದ್ರೋದಯದ ನಂತರ ಅರ್ಘ್ಯ ಬಿಟ್ಟು ಫಲಾಹಾರ ಮಾಡುತ್ತಾರೆ.

**ಗಣೇಶ ಚತುರ್ಥಿ :** ಹಿಂದೂಗಳು ವೈಭವದಿಂದ ಆಚರಿಸುವ ಹಬ್ಬಗಳಲ್ಲಿ ಗಣೇಶ ಚತುರ್ಥಿಯೂ ಒಂದು. ಕರಾವಳಿಯಲ್ಲಿ ಇದಕ್ಕೆ ಚೌತಿ ಎಂದು ಕರೆಯುತ್ತಾರೆ. ಭಾದ್ರಪದ ಮಾಸದ ಶುಕ್ಲ ಪಕ್ಷದ ಚತುರ್ಥಿಯ ದಿನ ಈ ಹಬ್ಬವನ್ನು ಆಚರಿಸಲಾಗುತ್ತದೆ. ಬಂಟ ಸಮುದಾಯದಲ್ಲಿ ಮನೆಯಲ್ಲಿ ಗಣಪತಿಯ ಮೂರ್ತಿಯನ್ನು ಕುಳ್ಳಿರಿಸಿ ಪೂಜೆ ಮಾಡುವ ಸಂಪ್ರದಾಯವಿಲ್ಲ. ಚೌತಿಯ ದಿನ ಮನೆಯನ್ನು ಶುಚಿಗೊಳಿಸಿ ಗಣಪತಿಯ ಭಾವಚಿತ್ರಕ್ಕೆ ಹೂ-ಹಣ್ಣು, ಕಬ್ಬು, ಮೋದಕ, ಪಂಚ ಕಜ್ಜಾಯದ ನೈವೇದ್ಯಗಳನ್ನಿಟ್ಟು ಮನೆಯವರೆಲ್ಲ ಒಟ್ಟಾಗಿ ಸೇರಿ ಪೂಜೆ ಸಲ್ಲಿಸುತ್ತಾರೆ. ಹತ್ತಿರದ ದೇವಸ್ಥಾನದಿಂದ ಹವನದ ಕರಿ (ಪ್ರಸಾದ) ತಂದು ಊಟದ ಎಲೆಗೆ ಹಾಕಿ ನಂತರ ಮಿಸಾಲ್ (ಅಗಲಿದ ಹಿರಿಯರಿಗೆ ಬಡಿಸುವುದು) ಇಡುತ್ತಾರೆ. ಮಧ್ಯಾಹ್ನ ಊಟಕ್ಕೆ ಪಾಯಸ ಮತ್ತು ವಿವಿಧ ತರಕಾರಿಗಳಿಂದ (ಬೆಂಡೆಕಾಯಿ, ಕೆಸು, ಹರಿವೆ ದಂಟು, ಅಮ್ಟೆಕಾಯಿ) ವಿಶೇಷ ಅಡಿಗೆ ತಯಾರಿಸುತ್ತಾರೆ. ಮಿಸಾಲ್ ಇಟ್ಟ ನಂತರ ಮನೆಯವರೆಲ್ಲರೂ ಒಟ್ಟಾಗಿ

ಕುಳಿತು ಬಾಳೆ ಎಲೆಯಲ್ಲಿ ಊಟ ಮಾಡುತ್ತಾರೆ. ಹಿಂದೆ ಹಳ್ಳಿಯಲ್ಲಿ ಚೌತಿಯ ದಿನ ಅಥವಾ ಅಷ್ಟಮಿಯ ದಿನ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಕೈಗೆ ಮದರಂಗಿ ಇಟ್ಟುಕೊಳ್ಳುವ ಸಂಪ್ರದಾಯವಿತ್ತು. ಆಗ ಮದರಂಗಿ ಹುಡಿ ಸಿಗುತ್ತಿರಲಿಲ್ಲ. ಆದ್ದರಿಂದ ಅಕ್ಕಪಕ್ಕದ ಮನೆಯ ಹೆಣ್ಣು ಮಕ್ಕಳು ಒಟ್ಟಾಗಿ ಎಲ್ಲಿಂದಲೋ ಮದರಂಗಿ ಸೊಪ್ಪು ತಂದು, ಕಡೆದು ಸಂಜೆ ಎಲ್ಲರೂ ಒಟ್ಟಾಗಿ ಕುಳಿತು ಮದರಂಗಿ ಹಚ್ಚಿಕೊಳ್ಳುವುದೇ ಒಂದು ವಿಶೇಷ ಸಂಭ್ರಮವಾಗಿತ್ತು.

ಆಗ ಹಳ್ಳಿಯಲ್ಲಿ ಹಣವಿಲ್ಲದಿದ್ದರೂ ಜನರಿದ್ದರು. ಯಾವ ಹಬ್ಬವಾದರೂ ಎಲ್ಲರೂ ಒಟ್ಟಾಗಿ ಸಂಭ್ರಮಿಸುತ್ತಿದ್ದರು. ಆದರೆ ಈಗ ಎಲ್ಲರ ಮನೆಯಲ್ಲಿಯೂ ಹಣವಿದೆ. ಆದರೆ ಜನ ವಿರಳವಾಗಿದ್ದಾರೆ. ಜನರಂತೆಯೇ ಸಂಪ್ರದಾಯಗಳ ಆಚರಣೆಯೂ ಈಗ ಅಪರೂಪವಾಗಿದೆ. ನಮ್ಮ ಕರಾವಳಿಯ ಇಂತಹ ಸುಂದರ ಸಂಸ್ಕೃತಿ ಎಲ್ಲಿ ಪೂರ್ಣವಾಗಿ ಕಣ್ಮರೆಯಾಗುವುದೋ ಎಂದು ಆತಂಕವಾಗುತ್ತಿದೆ. ಹಾಗಾಗದಿರಲಿ ಎಂದು ಆಶಿಸೋಣವೇ?

– ನಿರ್ಮಲ ಸಿ. ರೈ

# ತುಳುವರ ಆಚರಣೆಗಳು

## ನಾಗರ ಪಂಚಮಿ

ಕರಾವಳಿಯ ಬಂಟ ಸಮುದಾಯದಲ್ಲಿ ಸುವ್ಯವಸ್ಥಿತವಾದ ಕುಟುಂಬ ವ್ಯವಸ್ಥೆಯಿದೆ. ಪ್ರತಿಯೊಂದು ಕುಟುಂಬದ ಹಲವಾರು ಕವಲುಗಳಿದ್ದರೂ ನಾಗಬನ ಮಾತ್ರ ಒಂದೇ ಇರುತ್ತದೆ. ಆಟಿ ತಿಂಗಳ ಅಮಾವಾಸ್ಯೆ ಕಳೆದು 5ನೇ ದಿನ ನಾಗರಪಂಚಮಿ. ಕುಟುಂಬದ ಸದಸ್ಯರು ಎಲ್ಲೇ ಇದ್ದರೂ ಅಂದು ಮೂಲ ನಾಗನ ಕಲ್ಲಿಗೆ ಅಭಿಷೇಕ ಮಾಡಿಸುವುದು ಪದ್ಧತಿ. ಮೂಲಸ್ಥಾನದ ಮನೆಯಲ್ಲಿ ಸಾಮೂಹಿಕ ಭೋಜನದ ನಂತರ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

## ಶ್ರೀ ಕೃಷ್ಣ ಜನ್ಮಾಷ್ಟಮಿ

ಆಟಿ ತಿಂಗಳ ಸಂಕ್ರಾತಿ ಕಳೆದು ಎಂಟನೇ ದಿನಕ್ಕೆ ಶ್ರೀಕೃಷ್ಣ ಜನ್ಮಾಷ್ಟಮಿ. ಮಧ್ಯಾಹ್ನದ ಭೂರಿ ಭೋಜನದ ವ್ಯವಸ್ಥೆ ಇರುತ್ತದೆ. ರಾತ್ರಿ ವೇಳೆಯ ಮದರಂಗಿ ಹಚ್ಚುವ ಕಾರ್ಯಕ್ರಮಕ್ಕೆ ಎಲೆಗಳನ್ನು ಕೊಯ್ದು ರುಬ್ಬಿ ಇಡುವುದು ಮತ್ತು ಬಾಳೆ ಎಲೆಯ 'ಕೊಟ್ಟಿಗೆ' (ಇಡ್ಲಿ ತರಹದ ಕಡುಬು) ತಯಾರಿಸುವುದು ಹೆಂಗಸರ ಮುಖ್ಯ ಕೆಲಸ. ಅಷ್ಟಮಿಯ ವ್ರತವನ್ನಾಚರಿಸುವವರು ಹಗಲೆಲ್ಲ ಉಪವಾಸವಿದ್ದು ರಾತ್ರಿ ಚಂದ್ರೋದಯದ ನಂತರ ಕೊಟ್ಟಿಗೆ ಸೇವಿಸುತ್ತಾರೆ. ತಡರಾತ್ರಿಯವರೆಗೆ 'ಚೆನ್ನೆ' ಆಡುವ ಸಂಪ್ರದಾಯವಿತ್ತು. ಅಷ್ಟಮಿಯ 'ಕೊಟ್ಟಿಗೆ' ಚೌತಿಯವರೆಗೂ ಇರುತ್ತದೆ.

ಅಷ್ಟಮಿಯ ಮಾರನೆ ದಿನ ಮೊಸರು ಕುಡಿಕೆ ಕಾರ್ಯಕ್ರಮ ಮಾಡುತ್ತಾರೆ. ಮೈದಾನದಲ್ಲಿ ಎರಡು ಕಂಬಗಳನ್ನು ನೆಟ್ಟು ಅದರ ಮಧ್ಯೆ ಒಂದು ಹಗ್ಗವನ್ನು ಕಟ್ಟಿ ಅದರಲ್ಲಿ ಮೊಸರು ಅಥವಾ ಇನ್ನಾವುದೇ ಬೆಲೆ ಬಾಳುವ ವಸ್ತುವನ್ನು ಇಟ್ಟು ಅದನ್ನು ಕೋಲಿನಿಂದ ಹೊಡೆದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಅದು ಬಹುಮಾನದ ರೂಪವಾಗಿ ಸಿಗುತ್ತದೆ. ಅದೇ ತರಹ ಅಡಕೆ ಮರವನ್ನು ಚೆನ್ನಾಗಿ ಪಾಲೀಶ್ ಮಾಡಿ ಅದನ್ನು ಮೈದಾನದಲ್ಲಿ ನಾಟಿ ಮಾಡಿ ಅದರ ತುದಿಯಲ್ಲಿ ಬಹುಮಾನವನ್ನು ಕಟ್ಟುತ್ತಾರೆ. ಆ ಅಡಿಕೆ ಮರಕ್ಕೆ ಎಣ್ಣೆ ಸವರಿರುವುದರಿಂದ ಎಂತಹ ಪಟುಗಳು ಕೂಡಾ ಮರ ಹತ್ತುವುದಕ್ಕೆ ಪ್ರಯಾಸ ಪಡಬೇಕಾಗುತ್ತದೆ. ಕೊನೆಗೆ ಪ್ರಯತ್ನ ಮಾಡಿ ಯಾರಾದರೂ ಮರದ ತುದಿಯೇರಿ ಅದರಲ್ಲಿರುವ ಬಹುಮಾನವನ್ನು ಗೆಲ್ಲುತ್ತಾನೆ. ಇದು ಮೈದಾನದಲ್ಲಿ ನೆರೆದ ಜನರಿಗೆ ಮೋಜು ತರುತ್ತದೆ. ಹಾಗೆ ಅಷ್ಟಮಿಗೂ ಕೂಡ ಹುಲಿವೇಷ, ಕೊರಗವೇಷ ಹಾಕುವುದು ಇದೆ. ಅಷ್ಟಮಿ ಕಳೆದ ಮೇಲೆ ಚೌತಿ ಹಬ್ಬ ಬರುತ್ತದೆ. ಅಷ್ಟಮಿಗೂ ಕೆಲವು ಕಡೆ ಕೋಳಿ ಅಂಕ ಇರುತ್ತದೆ. ಅದಕ್ಕೆ ಅಷ್ಟಮಿ ಕಟ್ಟ ಎನ್ನುತ್ತಾರೆ.

## ಚೌತಿ

**ಚೌತಿ :** ತುಳು ನಾಡಿನಲ್ಲಿ ಸೋಣ ತಿಂಗಳ ಅಮವಾಸ್ಯೆ ಕಳೆದು ನಾಲ್ಕನೆಯ ದಿವಸವೇ ವಿನಾಯಕ ಚೌತಿ. ಕಾರ್ಮೋಡ ತುಂಬಿದ ಆಗಸ, ಕುಂಭ ದ್ರೋಣ ಮಳೆಯಿಂದ ಸ್ವಲ್ಪ ಬಿಡುವು ಪಡೆದು ಎಳೆ ಬಿಸಿಲು

ಬೀರುವ ಸಮಯವಾಗಿದ್ದು, ಧರೆಯು ಹಚ್ಚ ಹಸಿರಿನಿಂದ ಕಂಗೊಳಿಸುವ ಸಮಯದಲ್ಲಿ ಚೌತಿ ಹಬ್ಬ ಬರುತ್ತದೆ.

ಕಾಸರಗೋಡಿನ ಭಾಗದ ನಮ್ಮ ಸಮಾಜದ ಮನೆಗಳಲ್ಲಿ ಚೌತಿ ಹಬ್ಬವು ಅಂತಹ ವಿಜ್ರುಂಭಣೆಯ ಹಬ್ಬವೇನಲ್ಲ. ಅಲ್ಲಲ್ಲಿ ದೇವಸ್ಥಾನದ ಹತ್ತಿರ ಭಜನಾ ಮಂದಿರಗಳಲ್ಲಿ ಗಣೇಶ ವಿಗ್ರಹವನ್ನಿಟ್ಟು ಪೂಜೆ ಮಾಡಿ ಕೆಲವೊಮ್ಮೆ ಅಂದೇ ವಿಸರ್ಜನೆ ಮಾಡಿದರೆ ಕೆಲವು ಕಡೆ ವಾರಬಿಟ್ಟು ವಿಜ್ರುಂಭಣೆಯಿಂದ ವಿಸರ್ಜನೆ ಮಾಡುವುದಿದೆ. ಸರ್ವ ಸಾಮಾನ್ಯವಾಗಿ ಬಂಟ ಸಮಾಜದವರ ಮನೆಗಳಲ್ಲಿ ಗಣೇಶನ ವಿಗ್ರಹಗಳನ್ನಿಟ್ಟು ಪೂಜೆ ಮಾಡುವ ವಾಡಿಕೆಯಿಲ್ಲ. ಕೃಷಿ ಕುಟುಂಬದವರ ಒಂದು ಆಚರಣೆಯನ್ನು ಇಲ್ಲಿ ಪ್ರಸ್ತುತ ಪಡಿಸಬೇಕಾಗಿದೆ. ಚೌತಿ ಹಬ್ಬದ ದಿವಸ ಪ್ರಾತಃಕಾಲ ಮನೆಯ ಯಜಮಾನ ಮಡಿಯುಟ್ಟು ಗದ್ದೆಯಲ್ಲಿ ಮಾಗಿದ ತೆನೆಗೆ ಭಕ್ತಿಯಿಂದ ಧೂಪಾರಾಧನೆ ಮಾಡಿ ಹತ್ತಾರು ತೆನೆಯನ್ನು ಕುಡುಗೋಲಿನಿಂದ ಕತ್ತರಿಸಿ ಬುಟ್ಟಿಯಲ್ಲಿಟ್ಟು ತಲೆ ಮೇಲೆ ಹೊತ್ತುಕೊಂಡು ಬಂದು ತುಳಸಿ ಕಟ್ಟೆಯ ಹತ್ತಿರ ಇಳಿಸುತ್ತಾನೆ. ತುಳಸಿ ಗಿಡದ ಸುತ್ತು ನಾಲ್ಕು ಕೋಲನ್ನು ನೆಟ್ಟು ಅದಕ್ಕೆ ದಡ್ಡಲು ಮರದ ನಾರು ಮತ್ತು ಚೌತಿ ಹೂ ಬಳ್ಳಿಯಿಂದ ಸುತ್ತಿ ಕಬ್ಬಿನ ಕೋಲಿನಿಂದ ಹೂವಿನ, ಎಲೆಯ ತೋರಣದಿಂದ ಅಲಂಕಾರ ಮಾಡುತ್ತಾರೆ. ತುಳಸಿ ಕಟ್ಟೆಗೆ ಅರಶಿನ, ಕುಂಕುಮ ಮತ್ತು ಗಂಧದಿಂದ ಅಲಂಕಾರ ಮಾಡಿ ದೀಪ ಇಟ್ಟಿರುತ್ತಾರೆ. ಈಗಾಗಲೇ ತಂದಿರುವ ತೆನೆಯನ್ನು ತುಳಸಿಕಟ್ಟೆಯ ಮುಂದಿರಿಸಿ ಧೂಪಾರಾಧನೆ ಮುಗಿಸಿದ ಮೇಲೆ ದೀಪ ಸಮೇತ ತೆನೆಯನ್ನು ತಲೆ ಮೇಲೆ ಹೊತ್ತುಕೊಂಡು ಮನೆಯ ಚಾವಡಿಗೆ ತಂದಿರಿಸುತ್ತಾರೆ. ಆ ತೆನೆಯನ್ನು ಸ್ವಲ್ಪ ಸ್ವಲ್ಪವೆ ವಿಂಗಡಿಸಿ, ಅಶ್ವತ್ಥ, ಆಲ, ಹಲಸು, ಮಾವು, ಅತ್ತಿ, ಇತ್ತಿಮರ ಮತ್ತು ಚೌತಿ ಗಿಡದ ಎಲೆಗಳೊಂದಿಗೆ ದಡ್ಡಲಿನ ನಾರಿನಿಂದ ಸೂಡಿ ಮಾಡಿ ಮಾಡಿನ ಮುಂದಿನ ತೊಲೆಗಳಿಗೆ, ದಾರಂದದ ಕಂಬಗಳಿಗೆ ಕದಿಕೆ, ಪತ್ತಾಯಗಳಿಗೆ ಬಿಗಿದು ಕಟ್ಟುತ್ತಾರೆ. ಇದಕ್ಕೆ ತುಳು ಭಾಷೆಯಲ್ಲಿ 'ಇಲ್ಲ್ ದಿಂಜಾವುನೆ' (ಮನೆ ತುಂಬಿಸುವುದು) ಎನ್ನುತ್ತಾರೆ. ಪತ್ತಾಯ ಎಂದರೆ ಆಯಾತಾಕಾರದ ಕಲಾತ್ಮಕ ಕುಸುರಿ ಕೆಲಸದಿಂದ ಮರದ ಹಲಗೆಯಲ್ಲಿ ತಯಾರಿಸಿದ ಮಂಚದ ರೀತಿಯ ಪೆಟ್ಟಿಗೆಯಾಗಿರುತ್ತದೆ. ಇದರಲ್ಲಿ ಭತ್ತ, ಅಕ್ಕಿ ಜೊತೆಗೆ ಆಭರಣ ಇಡುವ 'ಕರಜಾನ'ವನ್ನು ಇಟ್ಟಿರುತ್ತಾರೆ. ಮನೆಯ ಯಜಮಾನ ಇದರ ಮೇಲೆ ಮಲಗುವುದು ವಾಡಿಕೆ. ದನಗಳ ಕೊಟ್ಟಿಗೆಗೆ ನೊಗ ನೇಗಿಲಿಗೆ ಕೃಷಿ ಸಲಕರಣೆಗಳಿಗೆ ಕೂಡ 'ಕುರಳ್' (ತೆನೆ) ಕಟ್ಟುವುದು ಸಂಪ್ರದಾಯ.

ಚೌತಿಯ ದಿವಸ ಮಧ್ಯಾಹ್ನವೆ ಪರ ಪುದ್ವಾರ್ ಹಬ್ಬದೂಟ ಕೂಡ ಮಾಡುವ ಪದ್ಧತಿ ಇದೆ. ಪರ ಪುದ್ವಾರ್ (ಹೊಸ ಅಕ್ಕಿ ಊಟಕ್ಕೆ ಪುದ್ವಾರ್ ಎನ್ನುವುದು) ಎಂದರೆ ಆರೇಳು ಭತ್ತದ ಕಾಳುಗಳನ್ನು ಬಿಡಿಸಿ ಹಳೆ ಅಕ್ಕಿ ಜೊತೆ ಬೇಯಿಸುವುದು ಮತ್ತು ಹಬ್ಬದ ಅಡಿಗೆ ಮಾಡುವುದು. ಅನ್ನ ಮಾಡುವ ಮಡಿಕೆಗೆ ಗಂಧ ಬಳಿದು ಚೌತಿ ಹೂವಿನ ಬಳ್ಳಿಯನ್ನು ಸುತ್ತಿ ಅಲಂಕಾರ ಮಾಡಿ ಒಬ್ಬರಿಗಿಂತ ಹೆಚ್ಚು ಹೆಂಗಸರು ಒಲೆ ಮೇಲಿಡಬೇಕು. ಅಂದಿನ ಪದಾರ್ಥಕ್ಕೆ ಕೆಸುವಿನ ದಂಟು ಮತ್ತು 'ಪದ್ಪೆದಂಟು' (ಹರಿವೆ) ಇರಲೇಬೇಕು. ಈ ಅಡುಗೆ ಜೊತೆಗೆ ಬೆಳ್ತಿಗೆ ಅಕ್ಕಿ ಹಿಟ್ಟಿನಿಂದ ಮಾಡಿದ ಸಣ್ಣ ಉಂಡೆಯನ್ನು ಎಣ್ಣೆಯಲ್ಲಿ ಕರಿದ ಉಂಡ್ಲುಂಗ ತಿನ್ನುವುದಕ್ಕೆ ಸ್ವಾದಿಷ್ಟವಾಗಿರುತ್ತದೆ. ಈ ಪುದ್ವಾರ್ ಊಟಕ್ಕೆ ಕೆಲಸದವರನ್ನು ಬಿಟ್ಟರೆ ನೆರೆಕರೆಯವರನ್ನು ನೆಂಟರನ್ನು ಕರೆಯುವ ವಾಡಿಕೆ ಇಲ್ಲ. ಅದೆಲ್ಲವೂ ಪೊಸ ಪುದ್ವಾರ್ ಊಟಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಒಂದು ವೇಳೆ ಯಾವುದೇ ಅಡಚಣೆಯಲ್ಲಿ ಪರ ಪುದ್ವಾರ್ ಮಾಡಲಿಕ್ಕೆ ಅನಾನುಕೂಲವಾಗಿದ್ದರೆ ಹೊಸ ಪುದ್ವಾರ್ ಆಗುವವರೆಗೆ ಎಲ್ಲೂ ಆ ಮನೆಯವರು ಹೊಸ ಅಕ್ಕಿ ಊಟ ಮಾಡುವ ಹಾಗಿಲ್ಲ.

ಚೌತಿ ಹಬ್ಬದ ವಿಶೇಷಗಳಲ್ಲಿ ತೆಂಗಿನಕಾಯಿ ಕಟ್ಟುವುದು (ಎರಡು ಜನ ಎದುರು ಬದುರಾಗಿ ತೆಂಗಿನಕಾಯಿಗಳನ್ನು ಒಡೆಯುವವರೆಗೆ ಡಿಕ್ಕಿ ಹೊಡೆಸುವ ಪಂದ್ಯ) ಮತ್ತು ಕೆಲವು ಜಾಗದಲ್ಲಿ ಕೋಳಿ ಅಂಕ ನಡೆಸುವುದು ಇದೆ. ಚೌತಿ ಹಬ್ಬವು ಸಮಾಜದ ಸರ್ವರಿಗೂ ಸುಖ ಶಾಂತಿ ನೆಮ್ಮದಿ ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಗಣೇಶನಲ್ಲಿ ಪ್ರಾರ್ಥಿಸುತ್ತಾ ಶುಭಕೋರುವ.

**– ಸೀತಾರಾಮ ಶೆಟ್ಟಿ ಮಾಣೂರು**

# FROM RAJ TO SWARAJ
## Long and Eventful journey to Freedom



A.Girish Rai

**Guided by the principles of Truth, Non-Violence and Sacrifice Indian Freedom Movement was a Revolution in itself, like the French Revolution (1789-1799), American War of Independence (1775-1783) and the Industrial Revolution. Ideas of freedom and democracy were born. The memories of golden period of the 'Freedom Movement' will remain in our minds and each new generation will derive inspiration from our most enduring Icons of freedom struggle. The luminous around their supreme sacrifice, suffering and service will remain undimmed for ever.**

Indian National Congress was founded in 1885 as a result of political awakening during the 19th Century. The Mutiny of 1857 generally referred as the 'First war of Indian Indpendence'. This ended the rule of East India Company, when British Parliament took charge of Indian affairs. The East India Company's Chartar Act of 1813 permitting the company to interfere in the affairs of Indian States had a clause which fecilitated the entry of British Missionaries into India which opened the process of conversions.

Economist-Historian Angus Maddison said that “India was the richest country and had World's largest Economy till 17th Century”. India's decline to poverty striken “Third World Country Status” happened during the British Rule when India's share dropped down to 4% of global GDP.

The Indian Freedom Movement was just taking shape and to curb this, Lord Curzon partitioned the Hindu majority Bengal in 1905 which led to major agitation. Hindus of West Bengal who dominated Bengal's business and rural life thought that the division would make them a minority in Bengal. They were outraged at what they saw as a “Divide and Rule Agenda”. Britishers helped to start 'All India Muslim League' as part of their Divide and Rule Policy' to get representation in Provisional elections. Later on the **Minto-Morley Reforms 1909** permitted separate electorate for Muslims. At that juncture Mahatma Gandhi returned from South Africa in 1915 started, Satyagraha, a form of peaceful Agitation against the oppressive foreign rule. The Champaran Movement of 1917 Kheda of 1918 and the peaceful Non Co-operation movement became powerful. The Britishers introduced **Rowlett Act 1919** suspending civil liberties and the horrible Jallianwala Bagh Massacre happened during this period. The young nationalists such as Chandrashekar Azad, Bhagath Singh, Sukhdev and Rajguru resorted to

violent agitation against the Governement. The demand for freedom from oppressive rule intensified. Gandhiji undertook **Dandi March** protesting against heavy tax on salt.

**SIMON COMMISSION**

The British Government to ease the situation, sent 'Simon Commission' to assess the ground reality and to suggest the level of freedom to be granted to Indians. The commission arrived in India on 30th October 1928 and was to travel to Lahore by train. By then Navjavan Bharath Sabha had organised protest against Simon with Black flag 'Simon go back' chants. Lala Lajpath Rai and Pandit Madan Mohan Malaviya were to lead the protest. When the agitation was finalised one young boy went to Lala Lajpath Rai and persuaded him to lead the protest movement and brought Lalaji to the venue. The boy was none other than the irresistable - Bhagath Singh.

When Simon Commission arrived at Lahore Railway station a big mob of Agitators greeted him with slogans "Simon Go Back". The young revolutionaries blocked the passage and stopped Simon from proceeding further. Then Police superintendent **Mr.Scott** discussed the situation with other police officials to protect Simon, and other Members from the fury of the mob. Scott called his trusted Assistant Police Superintendent Sanders, asked him to clear the way, if necessary by using force. **Sanders** immediately ordered Lathi Charge and the mob was subjected to severe cruelty. At that moment Lalaji was



standing at a place without moving away. Sanders with a big wooden club hit Lala Lajpat Rai in head and chest in spite of grave protest from Bhagath Singh and others. Lalaji sustained severe injuries and fell down. In the evening at the same place 'Moree Dharwaja Maidan' - a public Meeting was arranged. Lalaji while addressing the People thundered **"I declare that the blows struck at me will be the last nails in the coffin of the British Rule in India".** Lalaji succumbed to the injury on 17th November 1928, 18 days after the incident. This enrgaged Bhagath Singh who was a student of National Collage Lahore founded by Lala Lajapath Rai, Bhagath Singh and Rajguru after waiting for some days shot down Sanders while he was coming out of his office at about 4 PM on 17th December 1928. They became friendly with another freedom fighter **Chandrashekara Azad.** They formulated another plan to disrupt the Delhi National Assembly meeting which was about to pass two Bills aimed at stopping freedom movement, though Bills were passed by the congress government. The Viceroy with the Veto power was about to pass the Bill.

Bhagath Singh and others entered visitors gallery with fire arms and Bombs. When Viceroy exercised his Veto, bombs were hurled in the Assembly hall with cries of **'Inkilab Zindabad'.** Both of them did not try to escape from the hall, sending the message of Revolution. They were arrested and charge sheeted.

At this time Mahatma Gandhi was about to leave for England to attend the Round Table Conference. The judgment was pronounced on 7th October 1930 awarding death sentence to Bhagath Singh



and others. This caused wide spread protest by Yuva Vahini and NauJawan Bharath Sabha started signature campaign against hanging of these Patriots. They requested Gandhiji to discuss this issue, strongly plead for Amnesty to these three youngsters. Gandhiji discussed with Lord Irwin every subject pertaining to Non Co-operation Movement which was withdrawn and People arrested during non co-operation movement were freed. But Gandhiji did not discuss the issue of Clemancy for some reasons. Eventually they were hanged on March 23rd, 1931 at 7.33 PM, first Sukhdev, next Bhagath Singh and then Rajguru all of them smilingly went to gallows. Lord Irwin had agreed to every demand of Gandhiji, he would have agreed to pardon these three revolutionaries had Gandhiji pleaded for that.

Mahatma Gandhiji who protested against the award of 1932 giving separate electorate to Muslims which widened the divide between the two communities. In the election held in the Provinces, Congress won 8 out of 11 provinces held during 1936 and 1937. **The Cripps Mission** which visited the country during March 1942 promised Dominion Status, but it did not happen. Protecting against this Gandhiji started **'Quit India Movement'** and called on the People **'Do or Die'** agitation. Netaji Subhash Chandra Bose revolutionized the movement and founded Indian National Army in September 1942. During March-April 1924-1944 the Indian National Army captured some parts of Manipur.

**MAN MADE TRAGEDY**

Robert Clive joined East India Company at Fort St. George Madras around 1746 had a reasonably successful career. The French took over Fort St.George, Robert Clive fled to Bengal. Later on he rose to higher position while the company along with the Trade, started intervening in the political land scape of India. As a General Clive defeated Siraj ud daula at Plassey in 1754 which opened up vast resources of Bengal and other Indian provinces. During this period he along with some other officers amassed wealth and

later on left for England. When questioned in the British Parliament on the suffering of millions who died in India due to starvation, Robert Clive replied that his loyalty was to East India Company and not to poor Indians of Bengal whom he described as either submissive, humble tyrannical and treacherous. Similar sentiments were also echoed by Winsten Churchill, Prime Minister of Britain over the tragic death by starving nearly 3 Lakhs Indians, a man made tragedy. Churchill and his followers diverted the shipments of food material sent by America and Australia to other areas. **'I hate Indians, I have the least sorrow for what is happening in Bengal now' said Chruchill.**

## SECOND WORLD WAR AND INDIAN INDEPENDENCE

The second world which devastated the whole world, started on 1st September 1939 when Germany attacked Polland. France and Britain entered after 2 days of Hitler's attack on Polland. More than 6 crore lost their lives about 3% of total World population during 1940 in this bloddy war between 1939 to 1945. The world was divided into two fierce groups. The genesis of Second world war was visible in the end of First world war itself, which could have been avarted, had the prominent leaders of big powers taken little care. The desire for territorial expansion, nationalism, industrial advancement and control of emerging scientific knowledge were some of the reasons for the outbreak of second world war.

Soviet Union's attack on Polland from the eastern side, was the immediate reasons for the war. Rivalry was going on for quite sometime. As the war started powerful nations aligned with France and enemy camp forming two blocks. More than ten crore people belonging to 30 countries including India participated in the War. Japan was looking for an appropriate reason to establish hegemony over Asia Pacific region had rivalry with China. In the mean time Germany started gaining control over major portions of Europe. At this point **'Malatov-Ribbon Trap Agreement'** was signed, USSR and Germany divided Europe between themselves. Japan jumped into the fray in 1941. Japan suffered setback in the battle of Hawai in 1942 and Germany was defeated by USSR in 1943 following many defeats. The allied forces defeated Italy in Sisily, then Japan suffered major setback during 1944-45 in South Central China area. Germany was defeated by the combined onslot of the Allied Forces and Berlin was taken by USSR and Polland forces. Germany surrendered unconditionally on 8th May 1945 ending the war in Europe. Japan attacked Pearl Harbour which upset America and dropped atom Bomb on Hiroshima and Nagasaki cities on August 6th and 9th August respectively.

Gandhiji and other Indian leaders might have thought that by supporting Great Britain India would be granted independence as early as possible. In reality it seems the war actually delayed Indian Independence at least by two three years.

## PROVINCIAL ELECTIONS

In the provincial elections held in 1945-46 Congress party secured majority and Lord Wavell Governer General of India invited Nehru to form the interim Government in September 1946. Mohammad Ali Jinnah, who was nursing a strong ambition of becoming the Prime Minister of India was disappointed. He thought that he can never dream of becoming Prime Minister in Hindu majority India and wanted to partition the country on communal basis. He instigated Muslims to revolt and demand for the partition of the country and formation of Pakistan at any cost. They even tried to reduce Hindu majority by resorting to Direct Action week in Hindu majority Bengal. More than 1 Lakh Hindus were butchered in Kolkatta city alone. Then British Government realised that the situation was grave and freedom could not be delayed any longer. Accordingly the 'Cabinet Mission' came to India to discuss the modalities of Independence. After this India's **Tryst with Destiny** happened on 15th August 1947.

## FREEDOM FIGHTERS

**Millions of patriotic men and women struggled to free the motherland from the Britishers. They had faced untold hardship, torture, went to jail and lost everything for the sake of Motherland. These freedom fighters gave us insights into human freedom, dignity and search for meaning with the power to transform lives of millions.**

Freedom fighters of Karnataka were role models for others. They were the supreme symbols of selflessness, sacrifice and service. Mahadevappa Shivabasappa Pattana of Ramdurg taluk, Belagavi district was a well known freedom fighter of Karnataka. Born in a well to do family (26-09-1911) lived for 107 years was a born freedom fighter, trained hundreds of volunteers and sacrificed every thing he had for the well being of the people. Mahadevappa Pattana was an ardent follower of Sardar Vallabhai Patel and jumped into the Quit India Movement. The women freedom fighters like Bellari Siddamma, Nagarathna Hiremat, Gunekal Bhimakka and Holalkere Gangamma played important role in freedom movement.

Flag hoisting was prohibited in Shivapura Congress Conference, even then Smt. Siddamma and Yashodhara Dasappa boldly hoisted the Flag. **Nowadays some leaders shockingly share the dias with the anti India gang, tukde tukde brigade who want to distablise and divide the country. These people see the present situation through through dystopian Eye. Britain was devastated in the Second World war and was about to go bankrupt. The patriotic British People stood firmly with the Government and saw through the difficult days. It is said that there are no anti-nationals in Japan, Isreal and many countries. When we will see such Patriotic Nationalism in our Motherland?**

# ಅಸ್ತಂಗತರಾದ ಹಿರಿಯ ಸಾಹಿತಿ ಡಾ. ಏರ್ಯ ಲಕ್ಷ್ಮೀನಾರಾಯಣ ಆಳ್ವ



ಹಿರಿಯ ಸಾಹಿತಿ ಏರ್ಯ ಲಕ್ಷ್ಮೀ ನಾರಾಯಣ ಆಳ್ವರು ಕಳೆದ 27.07.2019ರಂದು ತಮ್ಮ 94ನೇ ವಯಸ್ಸಿನಲ್ಲಿ ನಿಧನರಾಗಿರುವರು. ಶ್ರೀಯುತ ಆಳ್ವರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಮೊಡಂಕಾಪು ಬಳಿಯ ಏರ್ಯಬೀಡುವಿನಲ್ಲಿ 1926ರ ಮಾರ್ಚ್ ತಿಂಗಳಿನಲ್ಲಿ ಜನಿಸಿದರು. ತಂದೆ ಮಾವಂತೂರು ದಿ. ಸುಬ್ಬಯ್ಯ ಆಳ್ವ, ತಾಯಿ ಏರ್ಯಬೀಡು ದಿ. ಸೋಮಕ್ಕೆ ಆಳ್ವ, ಆಳ್ವರು ತಮ್ಮ ಪತ್ನಿ ಆನಂದಿ ಆಳ್ವ, ಪುತ್ರಿ ಸುಖದಾಬಾಲ ಹೆಗ್ಡೆ, ಅಳಿಯ ಏರ್ಯ ಬಾಲಕೃಷ್ಣ ಹೆಗ್ಡೆ, ಮೂವರು ಸಹೋದರಿಯರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿರುವರು.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಂಟ್ವಾಳ, ಹೈಸ್ಕೂಲ್ ವಿದ್ಯಾಭ್ಯಾಸವನ್ನು ಕೆನರಾ ಹೈಸ್ಕೂಲ್ ಮಂಗಳೂರಿನಲ್ಲಿ ಪಡೆದಿದ್ದರು. ಹೈಸ್ಕೂಲ್ ಶಿಕ್ಷಣ ಮುಗಿಸುವ ಮೊದಲೇ ಗಾಂಧೀಜಿ ಮತ್ತು ಕಾರ್ನಾಡ್ ಸದಾಶಿವರಾವ್ ಅವರಿಂದ ಪ್ರೇರಿತರಾಗಿ ರಾಷ್ಟ್ರಸೇವಾ ರಂಗಕ್ಕೆ ಧುಮುಕಿದರು. ಬಂಟ್ವಾಳ ತಾಲೂಕಿನ ಪುಟ್ಟ ಊರು ಅಮ್ಟಾಡಿ ಗ್ರಾಮದ ಏರ್ಯವನ್ನು ಪ್ರಪಂಚಕ್ಕೆ ಪರಿಚಯಿಸಿದ ಹೆಗ್ಗಳಿಕೆ ಇವರದ್ದು. ಇವರ ಪ್ರೀತಿಯ ಆಸ್ತಿ ಎಂದರೆ 15000ಕ್ಕೂ ಮಿಕ್ಕಿದ ಪುಸ್ತಕಗಳ ಭಂಡಾರ. ಅವುಗಳ ನಿರಂತರ ಓದು ಅವರ ಹವ್ಯಾಸವಾಗಿತ್ತು. ಸದಾ ಕೈಯಲ್ಲಿ ಪುಸ್ತಕವನ್ನು ಹಿಡಿದುಕೊಂಡಿರುವ ಇವರ ಮರಣದಿಂದ ಇಂದು ಅವರ ಮನೆ ಸಾಕೇತವು ಬರಿದಾಗಿದೆ.

1947ರಲ್ಲಿ 21ನೇ ವಯಸ್ಸಿನಲ್ಲಿಯೇ ಏರ್ಯಬೀಡಿನ ಯಜಮಾನಿಕೆ ಪಡೆದ ಇವರು ಗುತ್ತಿನಮನೆಗೆ ಒಂದು ಕಳೆಯಾಗಿದ್ದವರು. ದೈವ–ದೇವರ ಸೇವೆಯನ್ನು ನಿಷ್ಠೆಯಿಂದ ಮಾಡಿಕೊಂಡು ಬಂದವರು. 450 ವರ್ಷಗಳ ಇತಿಹಾಸವಿರುವ ಏರ್ಯಬೀಡಿನ ಯಜಮಾನರ ಸಾಲಿನಲ್ಲಿ ಆಳ್ವರು ಎದ್ದು ಕಾಣುವಂತಿದ್ದಾರೆ. ಸಮಾಜದಲ್ಲಿ ಅಳಿದು ಹೋಗುತ್ತಿರುವ ಕೂಡುಕುಟುಂಬದ ಮೌಲ್ಯಗಳು ಏರ್ಯ–ಬೀಡುವಿನಲ್ಲಿ ಸದಾ ಜೀವಂತವಾಗಿರಬೇಕು, ಇತರರು ಕೂಡಾ ಅಳವಡಿಸಿಕೊಳ್ಳಬೇಕೆನ್ನುವ ಉದಾತ್ತ ಚಿಂತನೆಯನ್ನಿಟ್ಟುಕೊಂಡು ಏರ್ಯ ಪ್ರತಿಷ್ಠಾನವೆಂಬ ಟ್ರಸ್ಟ್ ರೂಪಿಸಿದ್ದಾರೆ.

ಅಂದು ಸಾಹಿತಿ ಶ್ರೀಯುತ ನಾರಾಯಣ ಕಿಲ್ಲೆಯವರ ಒಡನಾಟದಲ್ಲಿ ಬೆಳೆದ ಆಳ್ವರು ಬರೆದ ರಾಮಾಶ್ವಮೇಧ ತರಂಗಗಳು 1959ರಲ್ಲಿ ಪ್ರಕಟವಾಯಿತು. ಈ ಕೃತಿಯು ಅಂದಿನ ಮೈಸೂರು ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳಲ್ಲಿ ಪಠ್ಯ ಪುಸ್ತಕವಾಗಿ ಪರಿಗಣಿತವಾಯಿತು. ಸ್ನೇಹಸೇತು – ಪತ್ರರೂಪದ ಕಾದಂಬರಿ; ಜೀವನ ಚಿತ್ರ–ಮುಳಿಯ ತಿಮ್ಮಪ್ಪಯ್ಯನವರ ಕುರಿತು; ಕೃತಿ ವಿಮರ್ಶೆ–ನಾಗೇಗೌಡರ ಸ್ವಾಗತ ಗೀತೆ. ಇತರ–ಮೊದಲ ಮಳೆ, ಸಂಚಯ, ಓರಗೆಗೆ ಒಲವಿನ ಒಸಗೆ ಮುಂತಾದವು. ತುಳುನಾಡಿನ ಭೂತಾರಾಧನೆಯ ಕುರಿತಾದ ಸಮಗ್ರ ಅಧ್ಯಯನ ಗ್ರಂಥ 'ಮಂಗಳ ತಿಮರು' ಕೌಟುಂಬಿಕ ಪರಿಚಯದ 'ನೂರರ ನೆನಪು'. ಸಂಪಾದಿತ ಗ್ರಂಥ – 'ಗಾನ ಕೋಗಿಲೆ' ಯಕ್ಷಗಾನ ಭಾಗವತ ದಾಮೋದರ ಮಂಡೆಚ್ಚರ ಸಂಸ್ಮರಣ ಗ್ರಂಥ.

ಸಹಕಾರಿ ಪಿತಾಮಹ ಮೊಳಹಳ್ಳಿ ಶಿವರಾಯರಿಂದ ಪ್ರಭಾವಿತರಾದ ಆಳ್ವರು ಆ ಕ್ಷೇತ್ರದಲ್ಲಿ ಅಸಾಮಾನ್ಯವಾದ ಕಾರ್ಯನಿರ್ವಹಿಸಿದ್ದಾರೆ. ಅವರು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಧಾರ್ಮಿಕ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದ್ದ ಆಳ್ವರು ವಿಶ್ವಹಿಂದೂ ಪರಿಷತ್ತ್‌ನ ಕರ್ನಾಟಕ ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅಖಿಲ ಕರ್ನಾಟಕ ಜಾನಪದ ಪರಿಷತ್ತಿನಲ್ಲಿ

ವಿಶ್ವಸ್ತರಲ್ಲಿ ಒಬ್ಬರಾಗಿದ್ದಾರೆ. ಇನ್ನೂ ಅನೇಕ ಸಾಮಾಜಿಕ ಸಂಘಟನೆಗಳಲ್ಲಿ ಅವರು ಕರ್ತವ್ಯ ನಿರ್ವಹಿಸಿದ್ದಾರೆ. ಉಡುಪಿ ಎಂ.ಜಿ.ಎಂ ಕಾಲೇಜಿನ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ತುಳು ನಿಘಂಟು ಯೋಜನೆ ಮತ್ತು ಇತರ ಅನೇಕ ಪ್ರಕಟಣೆಗಳಲ್ಲಿ ಸಹಭಾಗಿಯಾಗಿದ್ದರು. ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ, ಸೇಡಿಯಾಪು ಪ್ರಶಸ್ತಿ, ಕಡೆಂಗೋಡ್ಲು ಪ್ರಶಸ್ತಿ, ಪೊಳಲಿ ಶೀನಪ್ಪ ಹೆಗ್ಡೆ ಪ್ರಶಸ್ತಿ ಮುಂತಾದ ಅನೇಕ ಸಮಿತಿಗಳ ಅಧ್ಯಕ್ಷರಾಗಿದ್ದರು.

ಜಾನಪದ ಪ್ರೇಮಿ ಹೆಚ್.ಎಲ್ ನಾಗೇಗೌಡರು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭ 1969ರಲ್ಲಿ ಜನವರಿಯಲ್ಲಿ ಏರ್ಯ ಲಕ್ಷ್ಮೀನಾರಾಯಣ ಆಳ್ವರು ಎರಡನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ದಕ್ಷಿಣ ಕನ್ನಡ ಜಿಲ್ಲಾ ಮಾತ್ರ ಬಂಟರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಧರ್ಮಸ್ಥಳ ಕ್ಷೇತ್ರದ ಅನನ್ಯ ಅಭಿಮಾನಿಯಾಗಿದ್ದ ಆಳ್ವರು ಡಾ। ವಿರೇಂದ್ರ ಹೆಗ್ಗಡೆಯವರ ಅತ್ಯಂತ ಆತ್ಮೀಯರಾಗಿದ್ದು, ಅಲ್ಲಿಯ ಧಾರ್ಮಿಕ, ಸಾಹಿತಿಕ, ಸಾಮಾಜಿಕ, ಶೈಕ್ಷಣಿಕ ಚಟುವಟಿಕೆಗಳಲ್ಲಿ ಪ್ರಮುಖ ಭಾಗೀದಾರರಾಗಿದ್ದಾರೆ. ಕೆಲ ತಿಂಗಳ ಹಿಂದೆ ದೈವ ನರ್ತಕರ ಸಮಾವೇಶವನ್ನು ಬಂಟ್ವಾಳದ ಏರ್ಯಬೀಡಿನಲ್ಲಿ ಮಾಡಿದ್ದ ಆಳ್ವರು ಜಾನಪದ, ಸಾಹಿತ್ಯ, ಸಮಾಜ ಸೇವೆ, ಸಹಕಾರ, ಕೃಷಿ, ಸಂಶೋಧನೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಗಮನಹರಿಸಿದವರು. ಆಗಾಗ್ಗೆ ಏರ್ಯಬೀಡಿನಲ್ಲಿ ಚಿಂತಕರ ಚಾವಡಿ ಚರ್ಚೆ ನಡೆಸಿ ಸಮಾಜ ಸುಧಾರಣೆಯ ಒಳನೋಟವನ್ನು ಜಗತ್ತಿಗೆ ಒದಗಿಸಿದ್ದಷ್ಟೇ ಅಲ್ಲ, ಆ ಕಾಲದಲ್ಲೇ ಶಿಕ್ಷಣದ ಮೂಲಕ ಸಮಾಜೋದ್ಧಾರ ಸಾಧ್ಯವೆಂಬುದನ್ನು ನಿರೂಪಿಸಿದರು.

ಬಂಟ್ವಾಳ ತಾಲೂಕಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕಾಸರಗೋಡು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿರುವ ಅವರು ಮಂಗಳೂರು ವಿಶ್ವ ವಿದ್ಯಾಲಯದ ಗೌರವ ಡಾಕ್ಟರೇಟ್, ಬಂಟರ ಸಂಘದ ಅಮೃತ ಮಹೋತ್ಸವ ಗೌರವ, ತುಳು ಸಾಹಿತ್ಯ ಅಕಾಡೆಮಿ ಗೌರವ ಮತ್ತು ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ.

ತಮಗೆ ದೊರೆತ ಸನ್ಮಾನದಿಂದ ಶಾಶ್ವತ ನಿಧಿ ಸ್ಥಾಪಿಸಿ ವಿದ್ವಾಂಸರನ್ನು ಗೌರವಿಸಿ ಸನ್ಮಾನಿಸಿದ್ದಾರೆ. ಅವರು ಸ್ಥಳೀಯ ಮೊಡಂಕಾಪು ದೀಪಿಕಾ ಪ್ರೌಢಶಾಲೆ, ಎಸ್.ವಿ.ಎಸ್ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯಲ್ಲಿಯೂ ಸದಸ್ಯರಾಗಿ ದುಡಿದಿದ್ದಾರೆ. ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿದ್ದ ಇವರು ಪ್ರವಾಸಿಯಾಗಿ ಇಂಡೋನೇಶಿಯ, ಮಲೇಶಿಯಾ, ಸಿಂಗಾಪುರ, ನೇಪಾಳ, ಇಂಗ್ಲೆಂಡ್, ಬೆಲ್ಜಿಯಂ, ಜರ್ಮನಿ, ಫ್ರಾನ್ಸ್, ಸ್ವಿಜರ್‌ಲ್ಯಾಂಡ್, ಇಟಲಿ ದೇಶಗಳನ್ನು ಸುತ್ತಿ ಬಂದಿದ್ದಾರೆ.

ಈ ಎಲ್ಲಾ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಜಿಲ್ಲೆ, ರಾಜ್ಯದ ಅನೇಕ ಸಂಸ್ಥೆಗಳು ಅವರನ್ನು ಸನ್ಮಾನಿಸಿವೆ. ಕೆಲವು ವರ್ಷಗಳ ಹಿಂದೆ ಅವರ ಅಭಿಮಾನಿಗಳು ಸೇರಿ "ಏರ್ಯ" ಎಂಬ ಅಭಿನಂದನಾ ಗ್ರಂಥವನ್ನು ಮಂಗಳೂರಿನ ಪುರಭವನದಲ್ಲಿ ನಡೆದ ಸಾರ್ವಜನಿಕ ಅಭಿನಂದನಾ ಸಮಾರಂಭದಲ್ಲಿ ನೀಡಿ ಸನ್ಮಾನಿಸಿದರು. ಏರ್ಯ ಶ್ರೀ ಲಕ್ಷ್ಮೀನಾರಾಯಣ ಆಳ್ವರ ನಿಧನಕ್ಕೆ ದೇಶಾದ್ಯಂತ ಧಾರ್ಮಿಕ ಮುಖಂಡರುಗಳು, ಹಾಲಿ ಮತ್ತು ಮಾಜಿ ಸಂಸದ ಸದಸ್ಯರು, ಸಚಿವರುಗಳು, ಶಾಸಕರು, ಶಿಕ್ಷಣ ತಜ್ಞರು, ಕುಲಪತಿಗಳು, ಸಮಾಜ ಸೇವಕರು ಹಾಗೂ ಸಮಾಜದ ಗೌರವಾನ್ವಿತ ಸದಸ್ಯರುಗಳು ಸಂತಾಪ ಸೂಚಿಸಿರುವುದು ಆಳ್ವರ ಜನಪ್ರಿಯತೆಗೆ ಸಾಕ್ಷಿ.

ಏರ್ಯ ಲಕ್ಷ್ಮೀನಾರಾಯಣ ಆಳ್ವರ ಹೆಸರು ಇನ್ನು ನೆನಪು ಮಾತ್ರ. ಅವರ ಆದರ್ಶ ಜೀವನ ಹಾಗೂ ವಿವಿಧ ಕ್ಷೇತ್ರಗಳಲ್ಲಿನ ಅವರ ಸಾಧನೆ ಮಾತ್ರ ಚಿರಾಯುವಾಗಿ ಉಳಿಯುತ್ತದೆ. ಅವರ ಆದರ್ಶಗಳು ಮುಂದಿನ ಜನಾಂಗಕ್ಕೆ ದಾರಿದೀಪವಾಗಲಿ.

**ಎನ್. ಸತ್ಯಾನಂದ ಮೇಲಾಂಟ**

# ಪರಿವರ್ತನೆ ಜಗದ ನಿಯಮ



ಅನಸೂಯ ಜೆ. ರೈ

ಪ್ರಕೃತಿ ನಿರಂತರ ಚಲನಶೀಲೆ, ಕಾಣದ ನಾಳೆಯ ಬಗ್ಗೆ ಭಯ, ಕುತೂಹಲ-ಗಳಿದ್ದರೂ ಇದರಿಂದಲೇ ಬದುಕು ಸಹ್ಯ. ಬದಲಾವಣೆ ಇಲ್ಲದ ಬದುಕು ಹೇಗಿರಬಹುದು, ಎಂದಾದರೂ ಕಲ್ಪಿಸಿ-ಕೊಂಡಿದ್ದೇವೆಯೇ? ಹುಟ್ಟೇ ಇಲ್ಲದ, ಬೆಳವಣಿಗೆ ಇಲ್ಲದ, ಸಾವಿಲ್ಲದ ಬದುಕನ್ನು ನಿಜಕ್ಕೂ ಯಾರೂ ಬಯಸಲಾರರು. ಪ್ರತಿಕ್ಷಣವೂ ಬದಲಾಗುವುದರಿಂದ ಇದು ನಿತ್ಯ ನೂತನ. ಪರಿವರ್ತನಾ ಗುಣವೇ ಜೀವಂತಿಕೆಯ ಲಕ್ಷಣ.

ಭಗವಂತನ ಸೃಷ್ಟಿಯಲ್ಲಿ ಎಲ್ಲವೂ ಪರಿಪೂರ್ಣ, ಒಂದುವೇಳೆ 200-300 ವರ್ಷ ಆಯುಷ್ಯವಿದೆ ಎಂದು ಕಲ್ಪಿಸಿಕೊಳ್ಳೋಣ. ಅಯ್ಯೋ ಅಷ್ಟು ವರ್ಷ ಖಂಡಿತ ಬೇಡ ಎಂದು ನಾವೆಲ್ಲರೂ ಹೇಳುತ್ತೇವೆ. ಕಾಲಕಳೆದಂತೆ ವಯಸ್ಸು ಇಳಿದಂತೆ ಮನುಷ್ಯನ ಉತ್ಸಾಹ ಕುಗ್ಗುತ್ತದೆ. ಆಸೆ, ಆಕಾಂಕ್ಷೆಗಳು ತಗ್ಗುತ್ತವೆ. ಒಂದು ವರ್ಷ ಜಾರಿ ಮತ್ತೊಂದು ವರ್ಷ ಬರುತ್ತದೆ. ನಮಗೆ ನಮ್ಮ ಸುತ್ತಮುತ್ತಲಿನವರಿಗೆ ಎಲ್ಲರಿಗೂ ವಯಸ್ಸಾಗುತ್ತದೆ. ತನ್ನ ಮಗುವೇ ತನಗಿಂತ ಎತ್ತರಕ್ಕೆ ಬೆಳೆದು, ಒಂದು ಮಗುವಿನ ತಂದೆಯೋ, ತಾಯಿಯೋ ಆಗುವುದನ್ನು ನಾವು ಕಾಣುತ್ತಿರುತ್ತೇವೆ. ವರ್ತಮಾನ ಕಾಲ ಎಂದು ಹೇಳುವಷ್ಟರಲ್ಲಿ ಅದು ಭೂತಕಾಲವಾಗಿ ಹೋಗಿರುತ್ತದೆ. ವರ್ತಮಾನ ಪತ್ರಿಕೆಗಳಲ್ಲಿ ಭೂತಕಾಲದ ಸುದ್ದಿಗಳನ್ನು ಓದುತ್ತಿರುತ್ತೇವೆ.

ಪ್ರಕೃತಿಯ ವಿಚಾರ ಹಾಗಲ್ಲ, ಚಳಿಗಾಲದಲ್ಲಿ ಮರೆಯಾಗಿದ್ದ ಹುಟ್ಟು ಮತ್ತೆ ಕಾಣಿಸಿಕೊಳ್ಳುತ್ತದೆ. ಬರಿದಾಗಿ ನಿಂತಿದ್ದ ಮರಗಳು ಹಸಿರೆಲೆಗಳನ್ನು ತೊಡುತ್ತವೆ. ನಿಸರ್ಗದಲ್ಲೆಲ್ಲಾ ಹೊಸ ಹುಟ್ಟು, ಹೊಸ ಹುರುಪು, ಹೊಸ ಚೆಲುವು, ಹೊಸ ಚೈತನ್ಯ. ಆಟಿಯ ಅಂಜಿಕೆ ಕಳೆದು ಬದುಕಿಗೆ ಹೊಸ ಭರವಸೆ ಮೂಡಿಸುತ್ತ, ಬಂತಿದೋ ಶ್ರಾವಣ ಮಾಸ. ಮಾನವನ ಸುಖ ಸಂತೋಷಕ್ಕೆ ಪ್ರಕೃತಿಯ ಕೊಡುಗೆ ಅನಂತ. ಮನುಷ್ಯನ ದುಗುಡ-ದುಮ್ಮಾನಗಳನ್ನು ಪರಿಹರಿಸುವಂತಹ ವಿಶೇಷ ಆಕರ್ಷಣೆ ಪ್ರಕೃತಿಗಿದೆ. ಶ್ರಾವಣ ಮಾಸ ಆರಂಭವಾಗಿ ಹಬ್ಬಗಳ ಸಂಭ್ರಮಕ್ಕೆ ಮುನ್ನುಡಿಯಾಗಲಿದೆ. ಪ್ರತಿದಿನವೂ ಹಬ್ಬ. ಭೀಮನ ಅಮಾವಾಸ್ಯೆ, ನಾಗರಪಂಚಮಿ, ವರಮಹಾಲಕ್ಷ್ಮೀ, ರಕ್ಷಾಬಂಧನ, ಕೃಷ್ಣ ಜನ್ಮಾಷ್ಟಮಿ, ಶ್ರಾವಣ ಶನಿವಾರ, ಶ್ರಾವಣ ಸೋಮವಾರ ಹೀಗೇ ಸಾಲು-ಸಾಲು ಹಬ್ಬಗಳು ಬರುತ್ತವೆ. ಭಗವಂತನಿಗೆ ವಿಶೇಷ ಪೂಜೆಗಳು ಸಲ್ಲುತ್ತವೆ. ಬದುಕಿಗೆ ಹೊಸ ಸ್ಫೂರ್ತಿ, ಉತ್ಸಾಹವನ್ನು ನೀಡುತ್ತವೆ.

ನಮ್ಮ ದೃಷ್ಟಿಕೋನದಲ್ಲಿ ಬದಲಾವಣೆ ಆದರೆ ಸೃಷ್ಟಿಯಲ್ಲೂ ಬದಲಾವಣೆ ನಮಗೆ ಕಾಣಿಸುತ್ತದೆ. ಆದರೆ ಹೊರಗಿನಿಂದ ಸಿಗುವ ಯಾವುದೇ ಸ್ಫೂರ್ತಿ, ಉತ್ಸಾಹ, ಉಲ್ಲಾಸಗಳೇನಿದ್ದರೂ ತಾತ್ಕಾಲಿಕ. ಏಕೆಂದರೆ, ಪ್ರಕೃತಿಯಲ್ಲಿ ನಿರಂತರ ಬದಲಾವಣೆಯೊಂದೆ ಶಾಶ್ವತ. ನಮ್ಮೊಳಗೆ ಇರುವ ಆನಂದ, ಸಂತೋಷಗಳನ್ನು ಕಂಡುಕೊಳ್ಳುವುದಕ್ಕೆ ನಾವು ಪ್ರಯತ್ನಿಸಿದರೆ ಹೊರಗೆ ಸಂತೋಷ ಹುಡುಕುವುದರಿಂದ "ಹೊರ" ಬರುತ್ತೇವೆ. ಅದುವೇ ನಿಜವಾದ ಆನಂದದ ಸ್ಥಿತಿ.

ಮನಶಾಸ್ತ್ರಜ್ಞರು ಹೇಳುತ್ತಾರೆ "ಎಂದೋ ಆಗಿ ಹೋದ ಘಟನೆಗಳು ಬೇಸರ, ಮನಸ್ತಾಪಗಳು ಬದಲಾಯಿಸಲು ಸಾಧ್ಯವಿಲ್ಲದ ಆಗು-ಹೋಗುಗಳು. ಇವನ್ನೆಲ್ಲ ಕಟ್ಟಿಕೊಂಡು ಬದುಕಿನ ಪ್ರಯಾಣದಲ್ಲಿ ಹೊರೆ ಮಾಡಿಕೊಳ್ಳುತ್ತೇವೆ. ಎಲ್ಲವನ್ನೂ ಅಂದಂದಿಗೆ ಬಿಟ್ಟು ಸುಂದರ ವರ್ತಮಾನದಲ್ಲಿ ಜೀವಿಸುವುದಕ್ಕಿಂತ ಬೇರೆಯ ಗುರಿ ಜೀವನಕ್ಕೆ ಬೇಕಿಲ್ಲ.

# ಮನಃಪೂರ್ವಕ ನಮನಗಳು



ಕೆ. ಉಷಾ ಪಿ. ರೈ

ಬಂಟರ ಸಂಘದ ಅತ್ಯಂತ ಯಶಸ್ವೀ ಅಧ್ಯಕ್ಷ, ಸಂವೇದನಾ-ಶೀಲ ತುಳು ಸಾಹಿತಿ, ಅದ್ಭುತ ನಾಟಕಕಾರ, ಅಸಾಮಾನ್ಯ ಕಲಾಪೋಷಕ ಸನ್ಮಾನ್ಯ ಡಾ. ಡಿ. ಕೆ. ಚೌಟ ಅವರು ನಮ್ಮನ್ನು ಅಗಲಿದ್ದು ಬರೇ ಬಂಟರ ಸಂಘಕ್ಕೆ ಆದ ನಷ್ಟವಲ್ಲ. ಬರೇ ತುಳುವರಿಗೆ ಆದ ನಷ್ಟವಲ್ಲ, ಇಡೀ ಕರ್ನಾಟಕಕ್ಕೇ, ಕರ್ನಾಟಕದ ಸಮಗ್ರ ಕಲಾವಿಭಾಗಕ್ಕೇ ಆದ ನಷ್ಟ. ಕೆಲಸದ ನಿಮಿತ್ತ ಹೊರ ದೇಶಗಳಲ್ಲೇ ಸುತ್ತುತ್ತಿದ್ದ ಚೌಟರು ಭಾರತಕ್ಕೆ ಮರಳಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದು ಕನ್ನಡ ಕಲಾವಿದರಿಗಾದ ಲಾಭ, ಬಂಟರಿಗಾದ ಲಾಭ, ಸಮಸ್ತ ತುಳುವರಿಗೆ ಆದ ಲಾಭ. ಅವರಿಂದ ಧನಸಹಾಯ ಮತ್ತು ಪ್ರೋತ್ಸಾಹ ಪಡೆದ ಎಷ್ಟೋ ನಾಟಕಕಾರರಿದ್ದಾರೆ, ರಂಗಕರ್ಮಿಗಳಿದ್ದಾರೆ, ಚಿತ್ರಕಲಾವಿದರಿದ್ದಾರೆ.

ಚೌಟರು ಜನಿಸಿದ್ದು 1938ರ ಜೂನ್ ಒಂದರಂದು. ತಂದೆ ಕಾಸರಗೋಡು ಜಿಲ್ಲೆಯ ಮೀಯಪದವಿನ ದರ್ಬೆ ಮನೆತನದ ಪಟೇಲರಾಗಿದ್ದ ನಾರಾಯಣ ಚೌಟ. ತಾಯಿ ಮೋಹಿನಿ. ಮನೆಯ ಹಿರಿಯ ಮಗ. 1955 ರಲ್ಲಿ ಜನರಲ್ ಇನ್ಶೂರೆನ್ಸ್ ಕಂಪೆನಿಯ ಪ್ರತಿನಿಧಿಯಾಗಿ ಆಫ್ರಿಕಾಕ್ಕೆ ಹೋದ ಚೌಟರು ಘಾನಾ ಮತ್ತು ನೈಜೀರಿಯಾ ದೇಶಗಳಲ್ಲಿ 25 ವರ್ಷ ಕಾರ್ಯ ನಿರ್ವಹಿಸಿದರಲ್ಲದೆ ಸ್ವಂತ ಉದ್ಯಮಗಳನ್ನು ಸ್ಥಾಪಿಸಿ ಉದ್ಯಮಿಯಾಗಿಯೂ ಹೆಸರು ಮಾಡಿದ್ದರು. 1980ರಲ್ಲಿ ಸ್ವದೇಶಕ್ಕೆ ಮರಳಿದ ನಂತರ ಬೆಂಗಳೂರಲ್ಲೇ ಮೊದಲನೇಯದು ಎಂದಾಗಿದ್ದ 'ಸನ್ ವ್ಯಾಲಿ ರಿಸಾರ್ಟ್' ಸ್ಥಾಪಿಸಿದ್ದರಲ್ಲದೇ ತನ್ನದೇ ಆದ 'ಪಿ. ಸಿ. ಎಕ್ಸ್‌ಪೋರ್ಟ್' ಅನ್ನುವ ಸಂಸ್ಥೆಯನ್ನು ಸ್ಥಾಪಿಸಿ ರಫ್ತು ವಹಿವಾಟಿನಲ್ಲೂ ಹೆಸರು ದಾಖಲಿಸಿದ್ದರು. ಹುಟ್ಟೂರಿನ ನಂಟನ್ನು ಗಟ್ಟಿಗೊಳಿಸುತ್ತಾ ಅಲ್ಲಿ ಕೃಷಿಕನಾಗಿಯೂ ಹಲವಾರು ಪ್ರಯೋಗಗಳನ್ನು ಮಾಡಿ ಪ್ರಗತಿಪರ ಕೃಷಿಕನೆಂದೂ ಗುರುತಿಸಿಕೊಂಡಿದ್ದರು.

ಅವರದ್ದೇ ಆದ ಕೆಲಸಕಾರ್ಯಗಳಲ್ಲಿ ಮುಳುಗಿದ್ದರೂ ಬಿಡುವು ಮಾಡಿಕೊಂಡು 1993-95 ರ ಅವಧಿಯಲ್ಲಿ ಬಂಟರ ಸಂಘದ ಯಶಸ್ವೀ ಅಧ್ಯಕ್ಷರಾಗಿದ್ದರು. ಬಂಟ ಯುವಕರನ್ನು ಹುರಿದುಂಬಿಸುತ್ತಾ, ಹೊರದೇಶಗಳಲ್ಲಿ, ಹೊರರಾಜ್ಯಗಳಲ್ಲಿ ನೆಲೆಸಿದ್ದ ಬಂಟರನ್ನೂ ಒಟ್ಟುಗೂಡಿಸಿಕೊಂಡು ಬೆಂಗಳೂರಿನಲ್ಲಿ ಅದ್ದೂರಿಯ ವಿಶ್ವಬಂಟರ ಸಮ್ಮೇಳನವನ್ನು ನಡೆಸಿದ್ದು ಅವರ ದೊಡ್ಡ ಸಾಧನೆ. ಆಗ ಅವರ ಕಾರ್ಯ ದಕ್ಷತೆಯನ್ನು ಹತ್ತಿರದಿಂದ ಕಾಣುವ ಅವಕಾಶ ನನಗೆ ಸಿಕ್ಕಿತ್ತು.ರಾತ್ರಿ ಹಗಲೆನ್ನದೇ ಎಲ್ಲಾ ಮೇಲ್ವಿಚಾರಣೆಗಳನ್ನು ಅವರೇ ವಹಿಸಿಕೊಂಡು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾಗಿದ್ದರು. ನನಗೀಗಲೂ ನೆನಪಿದೆ ಒಂದು ರಾತ್ರಿಯ ಕಾರ್ಯಕ್ರಮವೊಂದು ಸ್ವಲ್ಪ ವಿಳಂಬವಾಗಿ ನಡೆದಾಗ ಅಷ್ಟು ದೊಡ್ಡ ಸಭಾಂಗಣದಲ್ಲಿ ಕಾರ್ಯಕ್ರಮ ವೀಕ್ಷಿಸಲು ಉಳಿದದ್ದು ಚೌಟರು, ನಾನು ಮತ್ತು ನನ್ನ ಯಜಮಾನರು ಮತ್ತು ಬೆರಳೆಣಿಕೆಯಷ್ಟು ಕೆಲವೇ ಕೆಲವು ಪದಾಧಿಕಾರಿಗಳು. ಇಂತಹ ಸಂದರ್ಭಗಳಲ್ಲಿ ಕಲಾವಿದರ ನೋವು ಅರ್ಥವಾಗೋದು ಸ್ವತಃ ಕಲಾವಿದರಿಗೆ ಮತ್ತು ಕಲಾಪೋಷಕರಿಗೆ. ಕಲಾವಿದರು ನೋವು ಪಟ್ಟಾಗ ಅವರನ್ನು ಸಮಾಧಾನಿಸಿ ಕಳುಹಿಸುವ ಜವಾಬ್ದಾರಿಯೂ ಚೌಟರದಾಗಿತ್ತು. ಬಂಟರ ಸಂಘದ ಚರಿತ್ರೆಯಲ್ಲಿಯೇ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಸಂಗತಿ ವಿಶ್ವಬಂಟರ ಸಮ್ಮೇಳನ, ಬಂಟರ ಸಂಘದ ಆವರಣದಲ್ಲಿ ದೇವಸ್ಥಾನ ನಿರ್ಮಾಣವಾದದ್ದು ಅವರ ಮುಂದಾಳುತನದಲ್ಲಿ.

ಮಂಗಳೂರಿನಿಂದ ಹೊರಡುತ್ತಿದ್ದ ವಡ್ಡರ್ಸೆ ರಘುರಾಮ ಶೆಟ್ಟಿಯವರು ನಡೆಸುತ್ತಿದ್ದ "ಮುಂಗಾರು" ಕನ್ನಡ ದಿನಪತ್ರಿಕೆ 1984ರಲ್ಲಿ ನಿಲ್ಲುವ ಹಂತಕ್ಕೆ ಬಂದಾಗ ಅದರ ಹೊಣೆಯನ್ನು ಹೊತ್ತುಕೊಂಡು 1995ರಲ್ಲಿ ಅದು

ನಿಲ್ಲುವವರೆಗೆ ನಡೆಸಿದ್ದು ಚೌಟರು. ಅವರಿಗೆ ಸಾಹಿತ್ಯ, ಕಲೆ, ರಂಗಭೂಮಿಯ ಕಡೆ ಅಪಾರ ಆಸಕ್ತಿ ಇತ್ತು. ವಿವಿಧ ರಂಗತಂಡಗಳೊಂದಿಗೆ ನಿಕಟ ಸಂಪರ್ಕ ಹೊಂದಿ ಹವ್ಯಾಸಿ ರಂಗ ಚಟುವಟಿಕೆಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಡುತ್ತಿದ್ದರು. ಅವರ ಹಿಂದೆ ಯಾವಾಗಲೂ ರಂಗಕರ್ಮಿಗಳ ಒಂದು ದೊಡ್ಡ ಗುಂಪೇ ಇರುತ್ತಿತ್ತು. ನಾಟಕರಂಗಕ್ಕೆ ಅವರಿತ್ತ ಪ್ರೋತ್ಸಾಹ, ಧನಸಹಾಯ ಮರೆಯಲಾಗದ್ದು. ಎಷ್ಟೋ ನಾಟಕಕಾರರು, ನಿರ್ದೇಶಕರು, ನಟರು ಅವರ ಪ್ರೋತ್ಸಾಹದಿಂದ ಇಂದು ನಾಟಕ ರಂಗದಲ್ಲಿ ತಮ್ಮ ಛಾಪನ್ನು ಒತ್ತುತ್ತಿದ್ದಾರೆ, ಹೆಸರು ಗಳಿಸುತ್ತಿದ್ದಾರೆ.

ಚಿತ್ರಕಲಾ ಪರಿಷತ್ತಿನ ಖಜಾಂಚಿಯಾಗಿ, ಪ್ರಧಾನ ಕಾರ್ಯದರ್ಶಿಯಾಗಿ, ಹಂಗಾಮಿ ಅಧ್ಯಕ್ಷರಾಗಿಯೂ ಶ್ರೀ ಡಿ. ಕೆ. ಚೌಟರು ಸೇವೆ ಸಲ್ಲಿಸಿದ್ದರು. ದೇಶದಾದ್ಯಂತದ ಕಲಾವಿದರನ್ನು ಆಹ್ವಾನಿಸಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಮತ್ತು ಅದರ ಎದುರಿನ ಇಡೀ ರಸ್ತೆಯುದ್ದಕ್ಕೂ ನಿರ್ಮಿಸಿದ್ದ ಸ್ಟಾಲುಗಳಲ್ಲಿ ಪ್ರಾರಂಭಿಸಿದ ಒಂದು ದಿನದ ಚಿತ್ರಕಲಾ ಪ್ರದರ್ಶನದಲ್ಲಿ ಎಲ್ಲೆಲ್ಲಿಂದಲೋ ಬಂದ ಕಲಾವಿದರು ಭಾಗವಹಿಸಿ ಕಲಾಕೃತಿಗಳನ್ನು ಮಾರಿ ಗುರುತಿಸಲ್ಪಟ್ಟಿದ್ದರು. ನೂರಾರು ಕಲಾವಿದರ ಭಾಗವಹಿಸುವಿಕೆಯ ಈ ಹಬ್ಬವನ್ನು 'ಚಿತ್ರಸಂತೆಯೆಂದೇ ಕರೆದು ಕಲೆಯನ್ನು ಸಾಮಾನ್ಯರಿಗೂ ತಲಪುವಂತೆ ಮಾಡಿದ್ದು, ಇವತ್ತಿಗೂ ಅದು ಮುಂದುವರಿದುಕೊಂಡು ಬಂದಿರುವುದು ಚಿತ್ರಕಲಾ ರಂಗದಲ್ಲಿ ಅವರ ಹೆಸರನ್ನು ಅಜರಾಮರವನ್ನಾಗಿ ಮಾಡಿದೆ. ಒಂದು ದಿನದ ಚಿತ್ರಸಂತೆಯನ್ನು ಕಲಾವಿದರಷ್ಟೇ ಅಲ್ಲದೇ ಎಲ್ಲಾ ಕಲಾ ಪ್ರೇಮಿಗಳು ಎದುರು ನೋಡುವಂತೆ ಮಾಡಿದೆ. ಚಿತ್ರಕಲಾ ಪರಿಷತ್ತಿನಲ್ಲೂ ಹಲವಾರು ಸುಧಾರಣೆಗಳನ್ನು ಮಾಡಿ ಅವರ ಕಾರ್ಯದಕ್ಷತೆಯ ಛಾಪನ್ನು ಒತ್ತಿದ್ದರು. ಹಲವಾರು ಬಾರಿ ಅವರನ್ನು ಅಲ್ಲಿ ಭೇಟಿಯಾಗುವ ಸಂದರ್ಭಗಳಲ್ಲಿ ಅವರ ಕಾರ್ಯ ನಿರ್ವಹಣೆಯ ದಕ್ಷತೆಯನ್ನು ಕಂಡು ಖುಷಿಪಟ್ಟಿದ್ದೇನೆ. ಅಲ್ಲಿಯ ಸಿಬ್ಬಂದಿಗಳು ಈಗಲೂ ಅವರನ್ನು ನೆನಪಿಸಿಕೊಳ್ಳುತ್ತಿರುತ್ತಾರೆ.

'ಆನಂದಕೃಷ್ಣ' ಎನ್ನುವ ಕಾವ್ಯನಾಮದಲ್ಲಿ ಹಲವಾರು ಕನ್ನಡ ಹಾಗೂ ತುಳು ಕೃತಿಗಳನ್ನು ರಚಿಸಿದ್ದರು. ಸ್ವಾತಂತ್ರ್ಯ ಪೂರ್ವ ತುಳು ಸಂಸ್ಕೃತಿ ಮತ್ತು ಜನಜೀವನದ ಪರಿಚಯವನ್ನು ಮಾಡಿತ್ತು ಅವರ 'ಕರಿಯವಜ್ಜೆರೆನ ಕಥೆಕ್ಲು'. 'ಮಿತ್ತ ಬೈಲ್ ಯಮುನಕ್ಕೆ', 'ಧರ್ಮೆತ್ತಿಮಾಯೆ', 'ಪಿಲಿಪತ್ತಿಗಡಸು' ಅವರಿಗೆ ಹೆಸರು ಗಳಿಸಿ ಕೊಟ್ಟ ತುಳು ಕೃತಿಗಳು. ಕನ್ನಡದಲ್ಲೂ 'ಅರ್ಧಸತ್ಯ, ಬಾಕಿಸುಳ್ಳಲ್ಲ', 'ಮೂರು ಹೆಜ್ಜೆ ಮೂರು ಲೋಕ' ಹೀಗೆ ಇನ್ನೂ ಹಲವು ಕೃತಿಗಳನ್ನು ರಚಿಸಿದ್ದರು. ಮಿತ್ತಬೈಲು ಯಮುನಕ್ಕೆ ಕನ್ನಡಕ್ಕೂ ಅನುವಾದವಾಗಿ ಸಮಸ್ತ ಕನ್ನಡಿಗರನ್ನೂ ತಲುಪಿದೆ. ತುಳು ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತರಾದ ಚೌಟರು ತುಳುವಿನ ಒಬ್ಬ ಉತ್ತಮ ಲೇಖಕರಾಗಿ ಗುರುತಿಸಲ್ಪಟ್ಟಿದ್ದಾರೆ. ಅವರ ತುಳು ನಾಟಕಗಳು ಯಶಸ್ವೀ ಪ್ರದರ್ಶನಗಳನ್ನು ಕಂಡಿವೆ ಮತ್ತು ಕಾದಂಬರಿಗಳ ಬಗ್ಗೆ ವ್ಯಾಪಕವಾದ ಚರ್ಚೆಗಳೂ ನಡೆದಿವೆ. ಅವರ ಪ್ರಥಮ ತುಳು ನಾಟಕ 'ಪಿಲಿಪತ್ತಿ ಗಡಸು' 360ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿವೆ. ಸಾಹಿತ್ಯ ವಲಯದಲ್ಲಿ ಅದರಲ್ಲೂ ತುಳುಸಾಹಿತ್ಯ ವಲಯದಲ್ಲಿ ಅವರು ಮರೆಯಲಾಗದ ಸಾಹಿತಿ. ಮಂಗಳೂರು ವಿಶ್ವವಿದ್ಯಾಲಯ ಅವರ ಸಾಹಿತ್ಯ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟನ್ನು ಕೊಟ್ಟು ಗೌರವಿಸಿದೆ.

ಜೀವನವೇ ಒಂದು ಬಂದು ಹೋಗುವ ನಾಟಕರಂಗ. ಪಾತ್ರ ಮುಗಿಸಿದ ಮೇಲೆ ರಂಗದಿಂದ ನಿರ್ಗಮಿಸಲೇಬೇಕು. ಪ್ರಪಂಚಬಿಟ್ಟು ಹೊರಟು ಹೋಗಲೇ ಬೇಕು. 82 ವರ್ಷದ ಸಾರ್ಥಕ ಬದುಕನ್ನು ಬದುಕಿ ಬಾಳಿದ ಚೌಟರು ನಮ್ಮನ್ನು ಬಿಟ್ಟು ಹೋಗಿದ್ದಾರೆ. ಅವರ ಅಗಲಿಕೆಯ ನಷ್ಟವನ್ನು ಯಾರೂ ತುಂಬಲಾಗದು. ಅವರ ಪತ್ನಿ ಮತ್ತು ಮಕ್ಕಳಿಗೆ ಈ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ನೀಡಲಿ, ಅವರು ನಡೆಸಿದ್ದ ಕೆಲಸಕಾರ್ಯಗಳು ಎಲ್ಲರ ಮನದಲ್ಲಿ ಉಳಿಯಲಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎನ್ನುವ ಹಾರೈಕೆಗಳೊಂದಿಗೆ.

# A Friend You Can Bank Upon - Vijaya Bank



Dr. Naresh Shetty

Some things in life are forever. Some memories give you pain, some happy times but some leave you with a loss which is difficult to explain. One such incident that caused immense turmoil was the recent development, where Government in its wisdom chose to merge three banks together. Among them one was Vijaya Bank, which gave lifeline to so many families in South kanara, now known as Dakshina Kannada & Udipi districts. A few weeks ago, I met a relative of mine who had worked and retired from Vijaya Bank. During our conversation, he spoke at length about his total career in the Bank and his experiences in a small village in interior South kanara to posting in North East part of India to working in Capital city of Delhi. He appeared totally disturbed by the decision of the Central Govt. and expressed his displeasure over the merger of the Bank with which he was associated for the last 30 years! The strange part was all his colleagues still introduced themselves as the employees of the previous Bank entity and clearly, did not know how to deal with the new situation.

What I realised during these conversation was, mergers and acquisitions play on the minds of the employees and all internal and external stakeholders. There is a collision of work cultures; a cloud of uncertainty surrounds the situation; an impact on the sentiment of stakeholders towards the brand – so much so that it can dispirit individuals due to the fear of lack of identity.

When I heard the Government's proposal to merge Vijaya Bank with Bank of Baroda my first thought was – How am I going to let go something which was a part of life since childhood? Established by a group of farmers in Dakshina Kannada in 1931, the bank was the lifeblood of the farmers who had lost their land due to the Land Reforms Act. The bank offered jobs to many who lost their land, provided credit facilities at a lower rate of interest and empowered farmers to cultivate their land without the dependency on untrusted financial resources. As far as I know, every Bunt family (the bank also having been started by Bunts) would have had at least one person who has worked for the bank or been associated with the bank! It created job security to employees. To people like me, the first loan came from Vijaya Bank to buy a car, a house 'to call my own' was attained through this bank; my children are all well-educated today, thanks to Vijaya Bank's timely trust and support. I continue

to have a loan for my new investment. The bond with the Bank remains.!

Vijaya Bank has always been like family, whenever I entered the bank, I would meet a lot of people from my close circle and feel like a family gathering! I have grown up with this bank; this is the bank I have dealt with all my life; it has been my financial partner throughout, how do I part with it?

How can there be no bank called 'Vijaya Bank' from tomorrow. It did well, thanks to those who dedicated their life to it. There was no reason or the need for merger!!. One would understand, if it was not doing well. But that is life. A surge of emotions surround me, dampening my spirits, taking Vijaya Bank away (with its name and identity) is, for me like losing a member of my own family.

'I banked on Vijaya Bank' and now it is history. Yet, I also know it is hard to forget someone who added so much value to your life and gave you so much to remember!

## ಅಮ್ಮ

ಅಮ್ಮ ಭೂಮಿ ತೂಕದ ಹೆಣ್ಣು
ಕರುಣೆ ಸೂಸುವ ಕಣ್ಣು
ನಸುಗೋಧಿ ಮೈಬಣ್ಣ ಐದಡಿಯ ನಿಲುವು
ಚಂದ ಕುಂಕುಮದ ಮುತ್ತೈದೆ
ದುಂಡು ಮುಖ ಮೂಗುಬೊಟ್ಟು
ಕೊರಳನಪ್ಪಿದ ಕರಿಮಣಿಸರ

ತುಂಬಿದ್ದರೂ ಸಂಕಷ್ಟಗಳ ಹೊರೆ
ಮೊಗದಲ್ಲಿ ಬತ್ತದ ಸರಳನಗೆ
ಇಂದಿಗೂ ಅರ್ಥವಾಗದ ಬಗೆ

ಬಾಲ್ಯದಂಗಳಕ್ಕೆ ಜಾರುವ ನೆನಪು
ತುಂಬು ಚಂದಿರನ ಇರುಳು
ಲಾಲಿ ಹಾಡುವ ಅಮ್ಮನ ಕೊರಳು

ಚಂದಮಾಮದ ರಾಜಕುಮಾರರ ಕಥೆ ಹೇಳುತ್ತಾ
ತುತ್ತು ಉಣಿಸುವ ಅಮ್ಮ
ಅತ್ತು ರಂಪಮಾಡಿದಾಗ ಕರೆಯುತ್ತಿದ್ದಳು
ಕಪ್ಪು ಕತ್ತಲೆಯಗುಮ್ಮ

ಅಪ್ಪನೊ ಕೋಪಿಷ್ಟ ರಾವಣಾಸುರ
ಅದ್ಹೇಗೋ ಅವನೊಂದಿಗೆ
ಏಗುತ್ತ ಬೇಯುತ್ತ
ನಾಲ್ಕು ದಶಕಗಳ ಕಾಲ
ಸಂಸಾರದ ನೊಗಕ್ಕೆ ಹೆಗಲು ಕೊಟ್ಟವಳು
ನಮ್ಮನ್ನೆಲ್ಲ ತಿದ್ದಿತೀಡಿ ಎರಡಕ್ಷರವ ಕಲಿಸಿದವಳು

ಅಮ್ಮನಿಗೆ ಕಷ್ಟಗಳ ಪ್ರವಾಹಕ್ಕೆ
ಎದುರಾಗಿ ಈಜುವ ಛಲ
ಸರೀಕರೆದುರು ತಲೆ ಎತ್ತಿ ನಿಲ್ಲುವ ಹಠ
ನಮಗೂ ಕಲಿಸಿದ್ದಾಳೆ ಎದೆಯುಬ್ಬಿಸಿ ನಡೆವ
ಸ್ವಾಭಿಮಾನದ ಪಾಠ

ಹಳ್ಳಿಯ ಹಳೆಯ ಹಂಚಿನ
ಮನೆಯ ಪಡಸಾಲೆಯಲ್ಲಿ ಕಪ್ಪು ಬಿಳುಪು
ಫೋಟೋದಲ್ಲಿ ತಣ್ಣಗೆ ನಗುತ್ತಾ
ನಮ್ಮನೆಲ್ಲ ಹರಸುತ್ತಿರುವ ಅಮ್ಮ
ನಿನಗಿದೊ ನುಡಿ ನಮನ
ನಿನ್ನ ಹೆಸರಲ್ಲಿದೆ ಕವನ

– ಬಾಲಕೃಷ್ಣ ಹೆಗ್ಡೆ ಬನ್ನಾಡಿ

# ಪರಿಶ್ರಮದಿಂದಲೇ ಪರಮ ಸಾಧನೆ



ಡಾ. ನಾಗರಮಠ
ಜಯರಾಮ ಶೆಟ್ಟಿ

ಅದೊಂದು ಗುಡ್ಡ ಪ್ರದೇಶದ ತಪ್ಪಲಿನಲ್ಲಿರುವ ಚಿಕ್ಕ ಹಳ್ಳಿ. ತಮ್ಮ ಊರಿನ ಮುನ್ನೆಲೆಯಲ್ಲಿರುವ ಆಂಜನೇಯ ಗುಡಿ ಮುಂದೆ ಗುರೂಜಿಯೊಬ್ಬರು ಕುಳಿತಿರುವುದು ತಿಳಿದು ಜನ ಅವರತ್ತ ಧಾವಿಸುತ್ತಾರೆ. ಮಹಾತ್ಮರನ್ನು ಕಂಡು, ವಿಧ ವಿಧವಾಗಿ ಸೇವಿಸುತ್ತ, ತಮಗೆ 'ಸ್ವರ್ಗ' ದ ಮಾರ್ಗವನ್ನು ಕರುಣಿಸುವರೆ ಬೇಡಿಕೊಳ್ಳುತ್ತಾರೆ. ಗುರೂಜಿ ವಿಚಲಿತರಾಗದೆ ಹೇಳುತ್ತಾರೆ. 'ನೋಡಿ ಮಕ್ಕಳೆ, ಇಲ್ಲಿಂದ ಈ ದುರ್ಗಮ ಬೆಟ್ಟದ ತುದಿತನಕ ನಿಮ್ಮಲ್ಲಿ ಹತ್ತುಮಂದಿ ಮೂವತ್ತು ದಿನ ಒಂದೇ ದಾರಿಯನ್ನು ಕ್ರಮಿಸಿ, ಅದರಲ್ಲೇ ಮರಳಿ. ಸ್ವರ್ಗಕ್ಕೆ ಅದೇ ದಾರಿ'. ಕೆಲದಿನಗಳಲ್ಲೇ, ಗುಡ್ಡದ ಹಾದಿ ಸುಗಮವಾಗುತ್ತ, ಹಿಂದೆ ಕಾಣದ, ಕೇಳದ ಪಾಳುಬಿದ್ದ ಗುಡಿಯೊಂದು ಗೋಚರವಾಗುತ್ತದೆ. ವಿಷಯ ತಿಳಿದು, ಊರಿಗೆ ಊರೇ ಸಂಭ್ರಮಿಸುತ್ತ, ಮಹಾತ್ಮರನ್ನು ಸಂಧಿಸುತ್ತದೆ. ಆಗ ಊರಿನ ಜನರನ್ನು ಸಂಬೋಧಿಸಿ ಹೇಳಿದ್ದು 'ಮಕ್ಕಳೇ, ನೀವು ಸ್ವರ್ಗದ ಮಾರ್ಗವನ್ನು ಕೇಳಿದಿರಿ, ಅದು ನನಗೂ ಗೊತ್ತಿರಲಿಲ್ಲ. ಆದರೆ, ಈ ಗುಡ್ಡದ ಮೇಲೆ ದೇವರ ಗುಡಿ ಇರುವ ವಿಚಾರ ತಿಳಿದಿದ್ದೆ. ನಿಮ್ಮಲ್ಲಿ ಯಾರಿಗೂ ಆ ಮಾಹಿತಿ ಮತ್ತು ಅನ್ವೇಷಣಾ ಮನಸ್ಸು ಇದ್ದಿರಲಿಲ್ಲ. ಅದಕ್ಕಾಗಿ ಈ ಉಪಾಯ ಹೂಡಿದೆ. ಸ್ವರ್ಗ ಸಿಗದಿದ್ದರೇನಾಯಿತು? ಪೂಜಿಸಲು ದೇವರಗುಡಿ ಸಿಕ್ಕಿತ್ತಲ್ಲಾ. ಅದನ್ನು ನಿಮ್ಮದಾಗಿಸಿಕೊಳ್ಳಿ'.

ಈ ಕಿರುಕತೆಯಲ್ಲಿ ಎಷ್ಟೊಂದು ಜೀವನ ಸಂದೇಶ ಅಡಗಿದೆ ನೋಡಿ. ನಮ್ಮ ಮಾರ್ಗವನ್ನು ಕಂಡುಕೊಳ್ಳುವ ಮತ್ತು ವಿಶ್ವಾಸದಿಂದ ಕ್ರಮಿಸುವ ಛಲವನ್ನು ನಾವೇ ಪ್ರಕಟಿಸಬೇಕು. ಕೆಲಸ ಎಷ್ಟೇ ಸಣ್ಣದಿರಲಿ, ಅದರಲ್ಲೇ ನಮ್ಮನ್ನು ನಾವು ನೂರಕ್ಕೆ ನೂರು ತೊಡಗಿಸಿಕೊಂಡಾಗ ಎರಡು ರೀತಿಯ ಫಲ ನಮ್ಮದಾಗುತ್ತದೆ. ಒಂದು ಕಾರ್ಯತತ್ಪರತೆಯ ಅನುಭೂತಿ, ಇನ್ನೊಂದು ಕೆಲಸದ ಗತಿಯಲ್ಲೇ ಅನೇಕ ಸಾಧ್ಯತೆಗಳ ಅರಿವಾಗುವ ಬಗೆ. ಪೂಜ್ಯ ಡಿವಿಜಿ ಯವರು ಇದನ್ನೇ ಉದ್ಗರಿಸಿದ್ದು 'ಏಕದಿಂದಲನೇಕ, ಮತ್ತನೇಕದಿಂ ಏಕ. ಈ ಕ್ರಮವೇ ವಿಶ್ವದಂಗಾಂಗ ಸಂಬಂಧ'. ಕಾಯಕವೇ ಕೈಲಾಸವೆಂದ ಬಸವಣ್ಣನವರ ಮಾತು ಇಂದು ಇಡೀ ಜಗಕ್ಕೇ ಮಾದರಿ. ಕೆಲಸವಿಲ್ಲದ ಮನಸ್ಸು ಮಹತ್ವದತ್ತ ಮಾರ್ದನಿಸದು.

ಕೆಲಸವಷ್ಟೇ ನನ್ನ ಕೆಲಸವೆನ್ನುವ ಜಪಾನ್ ಕೆಲಸ ಸಂಸ್ಕೃತಿ ನಮಗೆಲ್ಲ ಮಾದರಿಯಾಗಬೇಕು. ಕೆಲಸವಿಲ್ಲದ ಕೋತಿಗೆ ಒಂದು ಕೋಲನ್ನಾದರೂ ತೋರಿಸಿಕೊಡಿ, ಅದರ ಮೇಲೆ ಹತ್ತಿಳಿದೀತು! ಒಟ್ಟಿನಲ್ಲಿ ಕೆಲಸವೊಂದನ್ನು ಹಚ್ಚಿಕೊಳ್ಳಿ, ತಲೆಯನ್ನು ಚಚ್ಚಿಕೊಳ್ಳುವ ಪ್ರಮೇಯ ತಪ್ಪೀತು! ಅನಿಶ್ಚಿತತೆಯಿಂದ ಪಾರಾಗ ಬೇಕಾದರೆ, ಒಂದು ಕೆಲಸದಲ್ಲಿ ಇದೀಗ ತೊಡಗಿಸಿಕೊಳ್ಳಿ. ಕೆಲಸ ನಿರತ ವ್ಯಕ್ತಿಯನ್ನು ಒಮ್ಮೆ ಕಲ್ಪಿಸಿಕೊಳ್ಳಿ, ಅವನನ್ನು ಹಿಂಸಿಸಲು, ದಾರಿತಪ್ಪಿಸಲು ಸಾಧ್ಯವೇ?

ಪರಿಶ್ರಮವೇ ಸಾಧನೆಯೆಂದು ಅರ್ಥೈಸಿ-ಕೊಳ್ಳಬೇಕು. ಗುರಿಯತ್ತ ಕ್ರಮಿಸುವುದೇ ಸಂತಸದ ಪಯಣ. ಹಿಂದೆ ಹೇಳಿದ ಕತೆಯಲ್ಲಿ ಮಹಾತ್ಮರು ತಿಳಿಸಿದ್ದು ಇದನ್ನೇ. ದೇವರ ಗುಡಿಯ ಬಗ್ಗೆ ಅವರಿಗೆ ಗೊತ್ತಿತ್ತು. ಅಷ್ಟನ್ನೇ ಹೇಳಿದ್ದರೆ ಊರಿನ ಜನರು ನಂಬುತ್ತಿದ್ದರೆ? ಮೂವತ್ತು ದಿನ ಕ್ರಮಿಸಿದ್ದ ಶ್ರಮದ ಬೆಲೆ ಅವರಿಗೇ ಅರಿವಾದಾಗ, ಕಾಣಸಿಕ್ಕ ಪಾಳುಗುಡಿ ಸ್ವರ್ಗದನುಭವವನ್ನೇ ತಂದಿತಲ್ಲವೇ? ಇದೇ ಪ್ರಾಮಾಣಿಕ ಪರಿಶ್ರಮದಲ್ಲಿ ನಾವು ಕಾಣಬಹುದಾದ ಅನುಭವ, ಅನುಭೂತಿ.

# ಮಾನವೀಯ ಮೌಲ್ಯಗಳು ಎತ್ತ ಸಾಗುತ್ತಿವೆ?



ಅನುಷಾ ಶೆಟ್ಟಿ

ಮಾನವನ ಬುದ್ಧಿಮತ್ತೆ, ಆಕಾಂಕ್ಷೆಗಳು, ಸಂಶೋಧನಾ ಚಾತುರ್ಯ ಪ್ರಶಂಸಾರ್ಹ. ಇಂದು ಮಾನವ ಮೀನಿನ ಹೆಜ್ಜೆ ಗುರುತಿಸಬಲ್ಲ, ಬಾನಂಗಳದಲ್ಲಿ ಹಾರಾಡುತ್ತಿರುವ ಪಕ್ಷಿಯ ವೇಗ ಅಳೆಯಬಲ್ಲ, ಇಲ್ಲೇ ಇದ್ದು ಇನ್ನೊಂದು ದೇಶದ ಮೇಲೆ ಆಕ್ರಮಣ ಮಾಡಬಲ್ಲ, ಪ್ರಪಂಚದ ಯಾವುದೋ ಮೂಲೆಯಲ್ಲಿರುವ ಅಪರಿಚಿತರೊಂದಿಗೆ ಹರಟುತ್ತಾ ಕಾಲಕಳೆಯಬಲ್ಲ ಒಂದಾ..ಎರಡಾ..!! ಆತನ ಸಾಧನೆ ಶ್ಲಾಘನೀಯ.

ವಿಪರ್ಯಾಸವೆಂದರೆ, ಅಂಗೈಯಲ್ಲೇ ಪ್ರಪಂಚದ ಸ್ಥಿತಿ–ಗತಿ ವೀಕ್ಷಿಸಿ ಮರುಗುವ ನಾವು ನಮ್ಮ ಹತ್ತಿರದವರ ಕಷ್ಟಕ್ಕೆ ಕುರುಡಾಗಿದ್ದೇವೆ. ಇನ್ನಾವುದೋ ದೇಶದಲ್ಲಿರುವವರೊಂದಿಗೆ ಕಾಲಕಳೆಯಬಲ್ಲ ನಾವು ನಮ್ಮೊಂದಿಗಿರುವ ತಂದೆ ತಾಯಿ, ಸಂಬಂಧಿಕರು, ಸ್ನೇಹಿತರು, ಪ್ರೀತಿ ಪಾತ್ರರ ಬಗ್ಗೆ ಯೋಚಿಸುವ ಗೋಜಿಗೆ ಹೋಗುವುದಿಲ್ಲ. ಮೊಬೈಲ್‌ನಲ್ಲಿ ಲೀನವಾಗಿರುವ ನಾವು ರಸ್ತೆ ಪಕ್ಕದಲ್ಲಿ ಬಿದ್ದು ನರಳಾಡುತ್ತಾ, ಸಹಾಯಕ್ಕಾಗಿ ಅಂಗಲಾಚುವ ವ್ಯಕ್ತಿಯನ್ನು ನೋಡಿಯೂ ನೋಡದಂತೆ ಯಾಂತ್ರಿಕವಾಗಿ ಸಾಗುತ್ತೇವೆ. ಇದು ನಮ್ಮ ಮಾನವೀಯತೆಯಾ?? ಇಂದು ಸಾಧನೆಯ ಬೆನ್ನೇರಿ ಹೊರಟ ಮಾನವ ತನ್ನ ಮಾನವೀಯ ಮೌಲ್ಯಗಳನ್ನು ಕಡೆಗಣಿಸುತ್ತಿದ್ದಾನೆಯೇ ಎನ್ನುವ ಸಂಶಯ ಕಾಡುತ್ತಿರುವುದು ಸಹಜ.

ಈ ಕಳವಳ ಆಧುನಿಕತೆಯ ಕಡೆಗಲ್ಲ, ಆದರೆ ನಶಿಸುತ್ತಿರುವ ಮಾನವೀಯ ಮೌಲ್ಯಗಳ ಕಡೆಗೆ. ಕಾಲದ ಓಟಕ್ಕೆ ಅನುಗುಣವಾಗಿ ಬದಲಾಗಬೇಕಾದದ್ದು, ಬದಲಾಗುತ್ತಿರುವ ಸನ್ನಿವೇಶಕ್ಕೆ ಹೊಂದಿಕೊಳ್ಳಬೇಕಾದ್ದು ಅವಶ್ಯ. ಬದಲಾವಣೆ ಜಗದ ನಿಯಮ. ಆದರೆ, ಅದು ನಮಗೆ ಮಾರಕವಾಗದೆ, ಪೂರಕವಾಗಿರಬೇಕು. ‘ಆಧುನಿಕತೆ ತನ್ನನ್ನು ಪೋಷಿಸಿ ನೀವೂ ಬೆಳೆಯಿರಿ’. ಎನ್ನುತ್ತದೆಯೇ ಹೊರತು ನಿಮ್ಮ ವ್ಯಕ್ತಿತ್ವ, ಆದರ್ಶ, ಪ್ರೀತಿ, ವಿಶ್ವಾಸ, ಮಾನವೀಯ ಮೌಲ್ಯಗಳನ್ನು ಕಡೆಗಣಿಸಿ ಎಂದಲ್ಲ.

ಇಂದು ಮನುಷ್ಯ ಸಂಬಂಧಗಳು, ನವಿರಾದ ಬಾಂಧವ್ಯ ಯಾವುದೂ ಮೊದಲಿನಂತಿಲ್ಲ. ಆ ಕೂಡು ಕುಟುಂಬ, ಸಹಬಾಳ್ವೆ, ಸಹಕಾರ, ಸಹನೆ, ಸ್ನೇಹ, ಪ್ರೀತಿ, ವಿಶ್ವಾಸ, ಗೌರವಗಳಂತಹ ಮೌಲ್ಯಗಳೇ ಜನಜೀವನದ ಉಸಿರಾಗಿತ್ತು. ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರ ಅದ್ಭುತ, ಅಗ್ರಮಾನ್ಯ. ಇದು ಪ್ರಪಂಚದ ಯಾವ ಮೂಲೆಯಲ್ಲೂ ಕಾಣಸಿಗದು. ಇಂತಹ ಸುಸಂಸ್ಕೃತ ಸಮಾಜದಲ್ಲಿರುವ ನಾವು ಯಾಂತ್ರಿಕವಾಗಿ, ಅಮಾನವೀಯರಾಗಿ ಬದುಕುತ್ತಿರುವುದು ವಿಷಾದನೀಯ. ಹಾಗೆಯೇ ಹೆತ್ತವರನ್ನು ವೃದ್ಧಾಶ್ರಮದಲ್ಲಿರಿಸಿ ಐಶ್ವರ್ಯ, ಹಣ, ಆಡಂಬರ, ಪ್ರತಿಷ್ಠೆಯ ಹಿಂದೆ ಬಿದ್ದಿರುವವರಿಗೆ ಯಾವ ಮಾನವೀಯ ಮೌಲ್ಯಗಳ ಬಗ್ಗೆಯೂ ಮಾತನಾಡುವ ನೈತಿಕತೆ ಇಲ್ಲ.

ಇಂದು ಮನುಷ್ಯ ಸಾಧನೆಯ ತುತ್ತ ತುದಿಯಲ್ಲಿದ್ದಾನೆ. ಈ ಬೆಳವಣಿಗೆ ಪ್ರಶಂಸಾರ್ಹ, ಅವಶ್ಯಕ. ಜೊತೆಗೆ ಹಿರಿಯರ ಜೀವನ ಶೈಲಿ, ಆಚಾರ ವಿಚಾರ, ವ್ಯವಸ್ಥೆಗಳ ಬದಲಾವಣೆಯೂ ಸಹಜ. ಆದರೆ ನಮ್ಮ ಕನಿಷ್ಠ ಮೌಲ್ಯಗಳನ್ನು ಗಾಳಿಗೆ ತೂರಿ ಬದುಕಲು ಯಾವ ಆಧುನಿಕತೆ ಹೇಳುತ್ತದೆ?

ಆಧುನಿಕತೆ ನಮ್ಮ ಯೋಚನೆ, ಸಾಧನೆ ಗಳಲ್ಲಿರಬೇಕೇ ವಿನಃ ಅದೇ ಜೀವನವಾಗಬಾರದು. ಮನುಷ್ಯ ಈ ಆಧುನಿಕ ತಂತ್ರಜ್ಞಾನ ಗಳನ್ನು ಆಳುವ ಅರಸಾಗಬೇಕೇ ವಿನಃ ಅಡಿಯಾಳಲ್ಲ. ಉತ್ತಮ ವಿಚಾರಗಳನ್ನೆಲ್ಲ ಎಚ್ಚರಿಕೆಯಿಂದ ಸ್ವೀಕರಿಸಿ ವ್ಯಕ್ತಿತ್ವ ಎತ್ತರಿಸಿಕೊಳ್ಳೋಣ.

**"ರಾಜಕಾರಣಿಯಾಗು, ರಾಷ್ಟ್ರಭಕ್ತನೆ ಆಗು**
**ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು**
**ಏನಾದರೂ ಆಗು,ನೀ ಬಯಸಿದಂತಾಗು**
**ಏನಾದರೂ ಸರಿಯೇ ?**
**ಮೊದಲು ಮಾನವನಾಗು".**

# ಡಿ. ಎಮ್.ಐ.ಟಿ ಎಂಬ ವೈಜ್ಞಾನಿಕ ವ್ಯಕ್ತಿತ್ವ ಜಾತಕ



ವಿಜಯ್ ಕೆ. ಶೆಟ್ಟಿ

ಪ್ರತಿಯೊಬ್ಬ ವ್ಯಕ್ತಿಯಲ್ಲೂ ಜನ್ಮತಃ ಇರುವ ಕೌಶಲ್ಯದ ಬಗ್ಗೆ ತಿಳಿದುಕೊಳ್ಳಲು ಆ ವ್ಯಕ್ತಿಯ ಹತ್ತು ಬೆರಳಿನ ಅಚ್ಚುಗಳನ್ನು ವೈಜ್ಞಾನಿಕವಾಗಿ ಸಂಶ್ಲೇಷಿಸಿ ಆ ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವವನ್ನು ಅವರ ಮುಂದಿಡುವ ಒಂದು ವೈಜ್ಞಾನಿಕ ತಂತ್ರಜ್ಞಾನವೇ ಡಿ.ಎಮ್.ಐ.ಟಿ.

ನಮ್ಮ ಎಲ್ಲಾ ವಿಧವಾದ ಕೌಶಲ್ಯ ಹಾಗೂ ಸಾಮರ್ಥ್ಯದ ಬಗ್ಗೆ ಸರಿಯಾದ ಅರಿವು (ಮಾಹಿತಿ) ಹೊಂದಿರುವುದೇ ಯಶಸ್ಸಿನ ಗುರಿ ಮುಟ್ಟುವ ದಾರಿಯ ಮೊಟ್ಟ ಮೊದಲ ಹೆಜ್ಜೆ. ನಮ್ಮನ್ನು ನಾವು ಅರ್ಥ ಮಾಡಿಕೊಂಡು ನನ್ನೊಳಗಿನ ನಾನು ಯಾರು? ನನ್ನ ಸಾಮರ್ಥ್ಯವೇನು? ದೌರ್ಬಲ್ಯಗಳೇನು? ಎಂದು ತಿಳಿದುಕೊಳ್ಳುವ ವೈಜ್ಞಾನಿಕ ಜ್ಞಾನದಾಯಿನಿಯೇ ಡಿ.ಎಮ್.ಐ.ಟಿ. ನಮ್ಮ ಸಮಾಜದಲ್ಲಿ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಆತನ ಅಂಕಪಟ್ಟಿ, ಆತನಲ್ಲಿರುವ ಸಂಪತ್ತಿನ ಆಧಾರದ ಮೇಲೆ ಅಳೆಯುತ್ತೇವೆ. ಆದರೆ ಪ್ರತೀ ವ್ಯಕ್ತಿಯ ವ್ಯಕ್ತಿತ್ವ ಒಬ್ಬರಿಂದ ಒಬ್ಬರಿಗೆ ಭಿನ್ನವಾಗಿರುತ್ತದೆ. ಡಾ। ಹಾರ್ವಡ್ ಗಾರ್ಡ್ನರ್‌ರವರು ಹೇಳುವ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಎಂಟು ರೀತಿಯ ಬುದ್ಧಿ ಮತ್ತೆ (ಪ್ರತಿಭೆ)ಗಳಿರುತ್ತವೆ. ಅವುಗಳೆಂದರೆ, ಸಂಗೀತ ಜ್ಞಾನ, ತಾರ್ಕಿಕ ಶಕ್ತಿ, ನೃತ್ಯ ಹಾಗೂ ದೈಹಿಕ ಸಾಮರ್ಥ್ಯ, ನೆನಪಿನ ಶಕ್ತಿ, ವಾಕ್ಚಾತುರ್ಯ, ಆತ್ಮಸ್ಥೈರ್ಯ, ಪರಿಸರದ ಬಗ್ಗೆ ಗಮನಿಸುವ ಶಕ್ತಿ, ಭಾಷಾಜ್ಞಾನ. ಈ ವೈಜ್ಞಾನಿಕ ತಂತ್ರಜ್ಞಾನವನ್ನು ಮೊದಲು ಅಳವಡಿಸಿಕೊಂಡವರು ಸೋವಿಯತ್ ರಷ್ಯಾದವರು. ಅವರು ಈ ತಂತ್ರಜ್ಞಾನವನ್ನು ಮೊತ್ತಮೊದಲಿಗೆ 1972ರಲ್ಲಿ ಒಲಂಪಿಕ್ ಕ್ರೀಡೆಯಲ್ಲಿ ಅಳವಡಿಸಿಕೊಂಡರು. ಕೇವಲ ದೈಹಿಕ ಕ್ಷಮತೆ, ಸಾಮರ್ಥ್ಯ ಹಾಗೂ ಆತ್ಮಸ್ಥೈರ್ಯ ಹೊಂದಿದ ಕ್ರೀಡಾಳುಗಳನ್ನು ಈ ತಂತ್ರಜ್ಞಾನದ ಮೂಲಕ ಆರಿಸಿಕೊಂಡರು. ಆ ಬಾರಿಯ ಒಲಂಪಿಕ್‌ನಲ್ಲಿ 99 ಪದಕಗಳನ್ನು ಪಡೆದುಕೊಂಡರು. ಮತ್ತೆ 1976ರಲ್ಲಿ ಅದೇ ತಂತ್ರಜ್ಞಾನದ ಸಹಾಯದಿಂದ 125 ಪದಕಗಳನ್ನು ಪಡೆದುಕೊಂಡರು. ನಂತರದ ದಿನಗಳಲ್ಲಿ ಈ ತಂತ್ರಜ್ಞಾನ ತುಂಬಾ ಪ್ರಸಿದ್ಧಿ ಪಡೆದುಕೊಂಡಿದೆ. ಡಿ.ಎಮ್.ಐ.ಟಿ ತಂತ್ರಜ್ಞಾನಕ್ಕೆ ಸುಮಾರು 200 ವರ್ಷಕ್ಕೂ ಹೆಚ್ಚಿನ ಇತಿಹಾಸವಿದೆ. ಆದರೆ ಭಾರತದಲ್ಲಿ ಇತ್ತೀಚಿನ 15 ವರ್ಷಗಳಿಂದ ಜನಪ್ರಿಯತೆ ಪಡೆದುಕೊಂಡಿದೆ. ಡಿ.ಎಮ್.ಐ.ಟಿ–ಯನ್ನು ವಿಸ್ತರಿಸಿ ಹೇಳುವುದಾದರೆ ಡರ್ಮಟೋಗ್ಲಿಫಿಕ್ಸ್ ಮಲ್ಟಿಪಲ್ ಇಂಟೆಲಿಜೆನ್ಸ್ ಟೆಸ್ಟ್. ಪ್ರತೀ ವ್ಯಕ್ತಿಯ ಕೈಯಲ್ಲಿರುವ ಬೆರಳಚ್ಚು ಮತ್ತು ಅವರ ಮೆದುಳಿಗೆ ಅವಿನಾಭಾವ ಸಂಬಂಧವಿದೆ. ಇದನ್ನು ವೈಜ್ಞಾನಿಕವಾಗಿ ಸಂಶ್ಲೇಷಿಸುವ ತಂತ್ರಜ್ಞಾನ ಇದು. ಇದರಿಂದ ವ್ಯಕ್ತಿಯು ಭವಿಷ್ಯದಲ್ಲಿ ಯಾವ ರೀತಿಯ ವ್ಯಕ್ತಿತ್ವ ಪಡೆಯಲು ಆತನ ಪೂರ್ವಭಾವಿ ಯೋಚನೆಗಳು ಸ್ಪಂದಿಸುತ್ತಿವೆ, ಅವರು ಯಾವ ವಿಚಾರ (ಜ್ಞಾನ)ದ ಬಗ್ಗೆ ಹೆಚ್ಚು ಬುದ್ಧಿಮತ್ತೆ ಹೊಂದಿದ್ದಾರೆ ಎಂಬುದರ ಬಗ್ಗೆ ಆಳವಾಗಿ ಅಧ್ಯಯನ ನಡೆಸಿ ತಮ್ಮ ವ್ಯಕ್ತಿತ್ವವನ್ನು ಉತ್ತಮವಾಗಿ ಆ ಕ್ಷೇತ್ರದಲ್ಲಿ ರೂಪಿಸಿಕೊಳ್ಳಲು ಸಹಕಾರಿಯಾಗಿದೆ. ಡಿ.ಎಮ್.ಐ.ಟಿ–ಯನ್ನು ಯಾರು ಮಾಡಬಹುದು? ಎಂಬ ಪ್ರಶ್ನೆಯೊಂದು ಮನದಲ್ಲಿ ಮೂಡಿರಬಹುದು. ಮಕ್ಕಳಿಂದ ಹಿಡಿದು 100 ವರ್ಷದವರೆಗಿನ ಪ್ರತಿಯೊಬ್ಬರೂ ಮಾಡಿಸಬಹುದು. ಮಗು ತಾಯಿಯ ಗರ್ಭಾವಸ್ಥೆಯಲ್ಲಿರುವಾಗ ಭ್ರೂಣಾವಸ್ಥೆಯ 13 ರಿಂದ 21 ವಾರಗಳ ಮಧ್ಯೆ ಮೊದಲು ವಿಕಸನಗೊಳ್ಳುವ ದೇಹದ ಎರಡು ಪ್ರಮುಖ ಅಂಗಗಳೆಂದರೆ ಮೆದುಳು ಮತ್ತು ಬೆರಳಚ್ಚು (ಫಿಂಗರ್ ಪ್ರಿಂಟ್). ಒಂದು ಬಾರಿ ಬೆಳವಣಿಗೆ ಹೊಂದಿದ ಬೆರಳಚ್ಚು ಜೀವಿತದ ಕೊನೆಯುವರೆಗೂ ಬದಲಾಗುವುದಿಲ್ಲ. ಪ್ರತೀ ವ್ಯಕ್ತಿಯ ಮೆದುಳಿನಲ್ಲಿ 2 ಮುಖ್ಯ ಭಾಗಗಳಿರುತ್ತವೆ. ಬಲ ಹಾಗೂ ಎಡ ಭಾಗದ ಮೆದುಳು. ಇದರಲ್ಲಿ ಒಂದು ಭಾಗದಲ್ಲಿ 5 ಪಾಲಿಗಳಿರುತ್ತವೆ. ಎರಡು ಭಾಗದಲ್ಲಿ ಒಟ್ಟು 10 ಪಾಲಿ (ಹಾಳೆ)ಗಳಿರುತ್ತವೆ. ಈ ಹತ್ತು ಪಾಲಿಗಳು ಹಾಗೂ ಕೈಯಲ್ಲಿರುವ ಹತ್ತು ಬೆರಳಚ್ಚುಗಳ ಬೆಳವಣಿಗೆಯೂ

ಒಂದೇ ಸಮಯದಲ್ಲಿ ನಡೆಯುತ್ತದೆ. ಸಂಶೋಧನೆ ಪ್ರಕಾರ ಮೆದುಳಿಗೆ ಹಾಗೂ ಕೈ ಬೆರಳಿನ ಅಚ್ಚುಗಳಿಗೆ ನೇರವಾದ ಸಂಬಂಧವಿದೆ ಹಾಗೂ ಇದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿದೆ. ಒಬ್ಬ ವ್ಯಕ್ತಿಯ ಬೆರಳಚ್ಚಿನಂತೆ ಇನ್ನೊಬ್ಬ ವ್ಯಕ್ತಿಯ ಬೆರಳಚ್ಚು ಇರಲು ಸಾಧ್ಯವಿಲ್ಲ. ಹಾಗಾಗಿ ಒಂದೇ ರೀತಿಯ ವ್ಯಕ್ತಿತ್ವ ಕೂಡಾ ಇರಲು ಸಾಧ್ಯವಿಲ್ಲ. ಭಾವನೆಗಳನ್ನು ಹೊತ್ತ ಮುಖ ಮನಸ್ಸಿನ ಕನ್ನಡಿ ಹೇಗೋ, ಹಾಗೆ ಬೆರಳಚ್ಚು (ಫಿಂಗರ್ ಪ್ರಿಂಟ್) ಕೂಡಾ ಮೆದುಳಿನ (ವ್ಯಕ್ತಿತ್ವದ) ಕನ್ನಡಿಯಿದ್ದಂತೆ. ಕೈಯಲ್ಲಿರುವ ಬೆರಳಚ್ಚನ್ನು ವಿಶ್ಲೇಷಿಸಿ ಆ ವ್ಯಕ್ತಿಯ ಮೆದುಳಿನ ಪಾಲಿ (ಹಾಳೆ)ಗಳ ಬೆಳವಣಿಗೆ ಹಾಗೂ ಸಾಮರ್ಥ್ಯವನ್ನು ತಿಳಿದುಕೊಳ್ಳುವ ಈ ತಂತ್ರಜ್ಞಾನವನ್ನು ಕಾರ್ಪೋರೇಟ್ ಕಂಪೆನಿಗಳಲ್ಲಿ ಮಾನವ ಸಂಪನ್ಮೂಲ ವಿಭಾಗ, ವ್ಯಕ್ತಿತ್ವ ವಿಕಸನ ಕ್ಷೇತ್ರ, ಆರೋಗ್ಯ ಹಾಗೂ ಫಿಟ್ನೆಸ್, ಮೆಡಿಕಲ್ ಸೈನ್ಸ್, ಶಿಕ್ಷಣ ಕ್ಷೇತ್ರ ಮುಂತಾದ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.

ವಿದ್ಯಾರ್ಥಿಗಳಿಗೆ, ಮಕ್ಕಳಿಗೆ ಡಿ.ಎಮ್.ಐ.ಟಿ ಮಾಡಿಸುವುದರಿಂದಾಗುವ ಪ್ರಯೋಜನವೇನೆಂದರೆ, ಆ ಮಗುವಿನ ವ್ಯಕ್ತಿತ್ವ ಅಂದರೆ, "ನನ್ನಲ್ಲಿರುವ ಬಹುಮುಖ ಪ್ರತಿಭೆಗಳೇನು? ನನ್ನಲ್ಲಿ ಅಡಗಿರುವ ಕೌಶಲ್ಯವೇನು? ನನಗಿರುವ ಪ್ರಕೃತಿದತ್ತ ವರವೇನು? ನನ್ನ ಸಾಮರ್ಥ್ಯ ಮತ್ತು ನ್ಯೂನ್ಯತೆಗಳೇನು? ನನ್ನ ಜನ್ಮಜಾತ ಪಾಂಡಿತ್ಯವೇನು? ನನ್ನ ಕಲಿಕಾ ವಿಧಾನವೇನು? ನನಗಿರುವ ನೈಸರ್ಗಿಕ ಸಿದ್ಧಿಗಳೇನು? ನನ್ನಲ್ಲಿರುವ ನಾಯಕತ್ವದ ಗುಣಗಳೇನು? ನನ್ನ ವ್ಯಕ್ತಿತ್ವಕ್ಕೆ ಪೂರಕವಾದ ಉದ್ಯೋಗಾವಕಾಶವೇನು?" ಎಂಬುದನ್ನು ಈ ಟೆಸ್ಟ್‌ನ ಮೂಲಕ ತಿಳಿಯಬಹುದು. ಹಾಗೆಯೇ ಮಕ್ಕಳ ಕಾರ್ಯಕ್ಷಮತೆ, ಕೌಶಲ್ಯ, ನ್ಯೂನತೆ ಮತ್ತು ಸಾಮರ್ಥ್ಯಗಳನ್ನು ತಿಳಿದುಕೊಂಡು ನ್ಯೂನತೆಯಿಂದ, ದೌರ್ಬಲ್ಯದಿಂದ ಹೊರಬರುವ ದಾರಿಯನ್ನು ಕಂಡುಕೊಳ್ಳಬಹುದು. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ನಂತರ ಮುಂದೇನು? ಎಂಬ ವಿದ್ಯಾರ್ಥಿಗಳ ಹಾಗೂ ಪೋಷಕರ ಪ್ರಶ್ನೆಗೆ ಇದೊಂದು ಉತ್ತಮ ಮಾರ್ಗದರ್ಶಿ ಉತ್ತರ. ಏಕೆಂದರೆ, ಈ ದ್ವಂದ್ವ ಮನಸ್ಥಿತಿಯ ಸಮಯದಲ್ಲಿ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಡಿ.ಎಮ್.ಐ.ಟಿ ಮಾಡಿಸುವುದರಿಂದ ಅವರ ಭವಿಷ್ಯ ಜೀವನಕ್ಕೆ ಪೂರಕವಾದ ಮಾರ್ಗದರ್ಶನ ದೊರೆತು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಾಯಕಾರಿಯಾಗಲಿದೆ. ನಮ್ಮ ಮೇರು ವ್ಯಕ್ತಿತ್ವದೆಡೆಗೆ ನೇರವಾಗಿ ಸಾಗಲು ಪೂರಕವಾದ ಸಿದ್ಧ ಸಾಧನ ಇದು ಎಂದರೂ ತಪ್ಪಾಗಲಾರದು. ಇದನ್ನು ಗುರುತಿಸದೆ ಹೋದರೆ ಇದರಿಂದ ಕೇವಲ ವಿದ್ಯಾರ್ಥಿ ಜೀವನ ಮಾತ್ರವಲ್ಲ ಹಣ, ಸಮಯ, ಭವಿಷ್ಯ ಜೀವನ, ಮಾನಸಿಕ ಸಾಮರ್ಥ್ಯ ಇವೆಲ್ಲವನ್ನು ಕಳೆದುಕೊಂಡು ಅತೃಪ್ತ ಜೀವನ ಅವರದಾಗಬಹುದು. "ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ನಾವು ಈಜಲು ಪ್ರಯತ್ನಿಸಿದರೆ ಗುರಿ ತಲುಪಲು ತುಂಬಾ ಕಷ್ಟ, 100ರಲ್ಲಿ ಶತಾಯ ಗತಾಯ ಪ್ರಯತ್ನಪಟ್ಟ 10 ಜನರಷ್ಟೇ ಗುರಿತಲುಪಬಹುದು, ಆದರೆ ಪ್ರವಾಹದ ದಿಕ್ಕಿಗೆ ಈಜಿದರೆ ನಿರಾಯಾಸವಾಗಿ ಗುರಿತಲುಪಬಹುದು" ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಇದರಿಂದ ನಮ್ಮ ಮಕ್ಕಳನ್ನು ಸಮಾಜದ ಆಸ್ತಿಯಾಗಿಸಲು ವಿದ್ಯಾರ್ಥಿಗಳಿಗೆ ಪೂರಕವಾದ ಅವರ ಪ್ರತಿಭೆ, ವ್ಯಕ್ತಿತ್ವವನ್ನು ಗುರುತಿಸಿ ಆ ನಿಟ್ಟಿನಲ್ಲಿ ಬೆಳೆಸಿದರೆ ಅವರ ಭವಿಷ್ಯ ಉಜ್ವಲವಾಗುತ್ತದೆ. ಅದೇ ನಾವು ನಮ್ಮ ಮಕ್ಕಳಿಗಾಗಿ ಮಾಡುವ ಬಹುದೊಡ್ಡ ಆಸ್ತಿ. ಮಕ್ಕಳ ಬಗ್ಗೆ ಪಾಲಕರು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರ ಮಕ್ಕಳ ಮೇಲೆ ತುಂಬಾ ಪ್ರಭಾವ ಬೀರುತ್ತದೆ. ಪ್ರತೀ ಮಕ್ಕಳು ಕೂಡಾ ತಂದೆ ತಾಯಿಗೆ ಉತ್ತಮ ಉಡುಗೊರೆ. ಆದ್ದರಿಂದ ಅವರಲ್ಲಿರುವ ಬಹುಮುಖ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕೆ ವಿನಃ ಅವರ ಮೇಲೆ ನಮ್ಮ ಕನಸುಗಳನ್ನು ಹೇರಿ ಒತ್ತಡ ಸೃಷ್ಟಿಸಬಾರದು. ತಂದೆ ತಾಯಂದಿರಿಗೆ ಮಕ್ಕಳು ಉತ್ತಮ ಉಡುಗೊರೆಯಾದರೆ, ಡಿ.ಎಮ್.ಐ.ಟಿ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳ ಭವಿಷ್ಯಕ್ಕೆ ಅವರ ಸಂಪೂರ್ಣ ವ್ಯಕ್ತಿತ್ವಕ್ಕೆ ಜೀವನದಲ್ಲಿ ಒಂದೇ ಒಂದು ಬಾರಿ ನೀಡುವ ಅದ್ಭುತವಾದ, ಅನರ್ಘ್ಯವಾದ ಉಡುಗೊರೆಯಾಗಿದೆ. ಪ್ರತಿ ವ್ಯಕ್ತಿಯಲ್ಲಿ, ವಿದ್ಯಾರ್ಥಿಯಲ್ಲಿ ಪ್ರತಿಭೆಗಳು ಹಲವು. ಅದನ್ನು ತಿಳಿದುಕೊಂಡು ಉತ್ತಮ ಭವಿಷ್ಯ ರೂಪಿಸಲು ಇರುವ ಅದ್ಭುತವಾದ ಆವಿಷ್ಕಾರ ಅದೊಂದೇ ಡಿ.ಎಮ್.ಐ.ಟಿ.

PROPOSED

# BUNTS' SANGHA RNS VIDHYANIKETHAN-II

At Yalachaguppe Village, TavarekereHobli, Bangalore South Taluk

## PROJECT PROGRESS REPORT- JULY 2019





Weekly review meeting Kindergarten.





Boys hostel. Admin block reinforcements work in progress.





Boys hostel ground floor roof casted.Ladies hostel ground floor in progress.

**Madhukar M. Shetty**
Hon Secretary

**R. Upendra Shetty**
President

**K. Prakash Shetty**
Chairman, Project Committee

**Ramith B. Shetty**
Co-ordinator, Project Committee

**H. Ashok Kumar Shetty**
Convenor, Project Committee

**Office Bearers, EC members and members of Project Committee**

ADVT.


Creating life - long bonds
Since 19 Years
HOME FOR ALL
AVAIL THE BENEFITS OF
PMAY
Interest Subsidy Upto ₹2.67 lakh*
PRADHAN MANTRI AWAS YOJANA
RERA Approved
COST INCLUDING GST
1 MATHA Emerald
2 MATHA Opal
3 MATHA Ruby
4 MATHA Diamond
5 MATHA Pearl
6 MATHA Crystal
7 MATHA Sapphire
SAI MATHA GARDEN
Surathkal, Mangaluru.
Near Railway Station and International Airport Road, Surathkal
Just Pay ₹1 Lakhs*
To Book your Dream Home.
Budget Flats 15 Lakhs Onwards
MATHA Jyothi Residency
NH-66, Mukka
MATHA Residency
Pakshikere
MATHA Residency
NH-66, Mulky
MATHA Guru Residency
NH-66, Padubidri
MATHA Residency
NH-66, Padubidri
Project Approved in all Nationalized Bank
MATHA Builders & Developers
Developers Pvt. Ltd.
Surathkal: Thara Towers, 2nd Floor, International Airport Road, Surathkal, Mangaluru - 575 014.
Mumbai: Shop No. 8, Bldg. No. 1, New Venkateshwar Nagar, Cabin Road Bhayandar (E), Thane Dist - 401 105.
9980711966
7259209966
mathadevelopers108@gmail.com
www.mathadevelopers.com
CREDAI
7022481666
7259269966 (Mumbai)
Best Investment with Assured Rental Return

ADVT

# ಹಾರ್ದಿಕ ಅಭಿನಂದನೆಗಳು



ಸಿಎ. ಚಂದ್ರಶೇಖರ್ ಶೆಟ್ಟಿ



ಸಿಎ. ಚಂದನ್ ಕುಮಾರ್ ಹೆಗ್ಡೆ

ಕರ್ನಾಟಕ ರಾಜ್ಯ ಸನ್ನದು ಲೆಕ್ಕಪರಿಶೋಧಕರ ಸಂಘದ 2019-20ನೇ ಸಾಲಿನ ಆಡಳಿತ ಮಂಡಳಿ ಆಯ್ಕೆ ಚುನಾವಣೆಯಲ್ಲಿ ನಮ್ಮ ಸಂಘದ ಸದಸ್ಯರುಗಳಾದ **ಶ್ರೀ ಚಂದ್ರಶೇಖರ್ ಶೆಟ್ಟಿ** ಅಧ್ಯಕ್ಷರಾಗಿ, ಹಾಗೂ **ಶ್ರೀ ಚಂದನ್ ಕುಮಾರ್ ಹೆಗ್ಡೆ** ಕಾರ್ಯದರ್ಶಿಯಾಗಿ ಆಯ್ಕೆಗೊಂಡಿರುತ್ತಾರೆ. ನೂತನ ಪದಾಧಿಕಾರಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ, ತಮ್ಮ ಆಡಳಿತ ಅವಧಿಯಲ್ಲಿ ಲೆಕ್ಕ ಪರಿಶೋಧಕರ ಸಂಘವು ಉತ್ತರೋತ್ತರ ಯಶಸ್ಸನ್ನು ಕಾಣಲಿ ಎಂದು ಹಾರೈಸುವ,

ಶ್ರೀ ದೀಪಕ್ ಶೆಟ್ಟಿ
ಸಿಎ. ವಿಜಯ್ ಶೆಟ್ಟಿ
ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ

ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ
ಶ್ರೀ ಅಮರನಾಥ್ ಶೆಟ್ಟಿ ಹೆಚ್.
ಶ್ರೀ ಪಿ. ಪ್ರಸಾದ್ ಶೆಟ್ಟಿ

ADVT.

## ಮುಲ್ಕಿ ಸುಂದರ ರಾಂ ಶೆಟ್ಟಿ ಸ್ಮಾರಕ ಸಭಾಭವನಕ್ಕೆ ದೇಣಿಗೆ ನೀಡಲು ಸದಸ್ಯ ಬಾಂಧವರಲ್ಲಿ ಮನವಿ



ಆತ್ಮೀಯ ಸದಸ್ಯರೇ,

ದಿವಂಗತ ಶ್ರೀ ಎ.ಬಿ.ಶೆಟ್ಟಿಯವರು ಸ್ಥಾಪಿಸಿದ ವಿಜಯಾ ಬ್ಯಾಂಕನ್ನು ರಾಷ್ಟ್ರಮಟ್ಟದ ಬ್ಯಾಂಕನ್ನಾಗಿ ಪರಿವರ್ತಿಸಿದ ಹಾಗೂ ಸಾವಿರಾರು ಬಂಟ ಕುಟುಂಬಗಳಿಗೆ ಆಸರೆಯಾದ ಮಹಾನ್ ವ್ಯಕ್ತಿ ದಿವಂಗತ ಮುಲ್ಕಿ ಸುಂದರ ರಾಮ್ ಶೆಟ್ಟಿಯವರು ಎನ್ನುವುದರಲ್ಲಿ ಎರಡು ಮಾತಿಲ್ಲ. 1974ರ ಭೂಮಸೂದೆ ಕಾಯಿದೆಯಿಂದಾಗಿ ಸಾವಿರಾರು ಬಂಟ ಕುಟುಂಬಗಳು ಜೀವನಾಧಾರವನ್ನು ಕಳೆದುಕೊಂಡು ಅವರ ಜೀವನದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿತು. ಈ ಸಂದರ್ಭದಲ್ಲಿ ಸಾವಿರಾರು ಬಂಟ ಯುವಕರಿಗೆ ತಮ್ಮ ವಿಜಯಾ ಬ್ಯಾಂಕ್‌ನಲ್ಲಿ ಉದ್ಯೋಗ ನೀಡುವ ಮೂಲಕ ಅವರ ಕುಟುಂಬಗಳಿಗೆ ಆಧಾರವಾಗಿದ್ದು ಮಾತ್ರವಲ್ಲದೇ ಸಮುದಾಯದ ಹೆಣ್ಣುಮಕ್ಕಳಿಗೆ ಕೆಲಸ ನೀಡುವ ಮೂಲಕ ಮಹಿಳಾ ಸಬಲೀಕರಣಕ್ಕೆ ಮುನ್ನುಡಿಯಿಟ್ಟರು. ಹಂತಹಂತವಾಗಿ ಬೆಳೆದ ವಿಜಯಾ ಬ್ಯಾಂಕ್ ಮುಂದಿನ ದಿನಗಳಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಆಗಿ ಪರಿವರ್ತನೆ ಹೊಂದಿರುವುದು ಇತಿಹಾಸ.

ಸುಂದರ ರಾಂ ಶೆಟ್ಟಿಯವರು ಸಮುದಾಯಕ್ಕೆ ನೀಡಿದ ಕೊಡುಗೆಯನ್ನು ಚಿರಸ್ಮರಣೀಯವಾಗಿಸುವ ನಿಟ್ಟಿನಲ್ಲಿ ಅವರ ಹುಟ್ಟೂರಾದ ಮುಲ್ಕಿಯಲ್ಲಿ ಸುಮಾರು 2 ಎಕರೆ ಜಾಗದಲ್ಲಿ ಮುಲ್ಕಿ ಸುಂದರ ರಾಂ ಶೆಟ್ಟಿ ಸ್ಮಾರಕ ಚಾರಿಟೇಬಲ್ ಟ್ರಸ್ಟ್‌ನ ನೇತೃತ್ವದಲ್ಲಿ ಭವ್ಯವಾದ ಸಭಾಂಗಣವೊಂದನ್ನು ನಿರ್ಮಿಸಲಾಗುತ್ತಿದೆ. ಅಂದಾಜು ಸುಮಾರು 25 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಸಭಾಭವನಕ್ಕೆ ಬೆಂಗಳೂರು ಬಂಟರ ಸಂಘದ ವತಿಯಿಂದ ಒಂದು ಕೋಟಿ ರೂಪಾಯಿಗಳ ದೇಣಿಗೆ ನೀಡುವ ಬಗ್ಗೆ ದಿನಾಂಕ 28.07.2019 ರಂದು ನಡೆದ ವಿಶೇಷ ಮಹಾಸಭೆಯಲ್ಲಿ ಅನುಮತಿ ಪಡೆಯಲಾಗಿದೆ.

ಆದ್ದರಿಂದ, ಮುಲ್ಕಿ ಸುಂದರ ರಾಂ ಶೆಟ್ಟಿಯವರ ಸ್ಮರಣಾರ್ಥ ನಿರ್ಮಾಣಗೊಳ್ಳುತ್ತಿರುವ ಈ ಬೃಹತ್ ಯೋಜನೆಗೆ ಸದಸ್ಯ ಬಾಂಧವರು ಹೆಚ್ಚಿನ ದೇಣಿಗೆ ನೀಡುವ ಮೂಲಕ ಬಂಟ ಸಮುದಾಯಕ್ಕೆ ಅತ್ಯುನ್ನತ ಕೊಡುಗೆ ನೀಡಿದ ಮುಲ್ಕಿ ಸುಂದರ ರಾಂ ಶೆಟ್ಟಿಯವರಿಗೆ ಗೌರವ ನಮನ ಸಲ್ಲಿಸಬೇಕಾಗಿ ವಿನಂತಿ.

ದೇಣಿಗೆ ನೀಡಲಿಚ್ಚಿಸುವ ಸದಸ್ಯ ಬಾಂಧವರು ಚೆಕ್/ಡಿಡಿಯನ್ನು ಬೆಂಗಳೂರು ಬಂಟರ ಸಂಘಕ್ಕೆ ಸಂದಾಯವಾಗುವಂತೆ ಸಂಘಕ್ಕೆ ಕಳುಹಿಸಬೇಕಾಗಿ ವಿನಂತಿ.

ಹೆಚ್ಚಿನ ವಿವರಗಳಿಗೆ ಸಂಘದ ಕಛೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.
(ದೂರವಾಣಿ : 23399635/ 23399635/ 7022119739)

**ಮಧುಕರ ಎಂ.ಶೆಟ್ಟಿ**
ಗೌರವ ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಬಂಟರ ಸಂಘ ಬೆಂಗಳೂರು

# 'ನಮ್ಮ ಮೊದಲ ಹೆಜ್ಜೆಯಲ್ಲೇ ಸಮಾಜದ ಋಣವಿದೆ' – ಡಾ. ಶ್ರೀಧರ ಶೆಟ್ಟಿ



ಮೂವತ್ತು ವರ್ಷದ ಹಿಂದೆ ನೀವು ಕಾಲೇಜು ಕಲಿಯುತ್ತಿರುವಾಗ ಬರೇ 250 ರೂಪಾಯಿ ಫೀಸ್ ಕಟ್ಟಿ ಡಿಗ್ರಿ ಮುಗಿಸಿರಬಹುದು, ಆದರೆ ಆವತ್ತೂ ಸರಕಾರ ನಿಮ್ಮ ಪರವಾಗಿ ಒಬ್ಬೊಬ್ಬ ಉಪನ್ಯಾಸಕರಿಗೆ ವರ್ಷಕ್ಕೆ ಸಂಬಳ ರೂಪದಲ್ಲಿ ಎಪ್ಪತ್ತೈದರಿಂದ ಒಂದು ಲಕ್ಷದವರೆಗೆ ಖರ್ಚು ಮಾಡುತ್ತಿತ್ತು. ಈ ಹಣ ಸಮಾಜದ ಗೌರವಾನ್ವಿತ ತೆರಿಗೆದಾರರಿಂದ ಬಂದ ಹಣ. ಹಾಗಾಗಿ ಸಮಾಜ–ಸರಕಾರ ನನಗೇನು ಕೊಟ್ಟಿದೆ? ಎಂದು ಕೇಳುವ ಹಕ್ಕು ನಮಗಿಲ್ಲ. ನಮ್ಮ ಮೊದಲ ಹೆಜ್ಜೆಯಲ್ಲೇ ಸಮಾಜದ ಋಣವಿದೆ. ಅದನ್ನು ಹಿಂತಿರುಗಿಸಿ ಕೊಡುವುದು ನಮ್ಮೆಲ್ಲರ ಕರ್ತವ್ಯ.

ಮೇಲಿನ ಮಾತುಗಳನ್ನು ಹೇಳಿದವರು ಮುಂಬೈ ಎಸ್.ಎಂ.ಎಸ್ ಕಾಲೇಜಿನ ಪ್ರಾಂಶುಪಾಲ ಮತ್ತು ಶಿರ್ವ ಕಾಲೇಜಿನ ಹಿಂದಿನ ವಾಣಿಜ್ಯ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಶ್ರೀಧರ್ ಶೆಟ್ಟಿಯವರು. ಬೆಂಗಳೂರಿನಲ್ಲಿ ತಾ॥ 07–07–2019 ರಂದು ನಡೆದ ಮುಲ್ಕಿ ಸುಂದರರಾಮ್ ಶೆಟ್ಟಿ ಕಾಲೇಜ್, ಶಿರ್ವ ಇದರ ಹಳೆ ವಿದ್ಯಾರ್ಥಿಗಳ ಬೆಂಗಳೂರು ಘಟಕವನ್ನು ಉದ್ಘಾಟಿಸುತ್ತಾ ಮೇಲಿನ ಮಾತುಗಳನ್ನು ಅವರು ಹಳೆ ವಿದ್ಯಾರ್ಥಿಗಳ ಗಮನಕ್ಕೆ ತಂದರು.

ಈ ಋಣವನ್ನು ತಾನು ಹೇಗೆ ಹಿಂತಿರುಗಿಸ–ಬಹುದು ಎಂದು ಪ್ರತಿಯೊಬ್ಬ ವಿದ್ಯಾರ್ಥಿಯೂ ಚಿಂತಿಸುವುದು ಆರೋಗ್ಯವಂತ ಸಮಾಜದ ದೃಷ್ಟಿಯಿಂದ ಅತೀ ಅಗತ್ಯ. ಅದು ಬೌದ್ಧಿಕವಾಗಿ, ದೈಹಿಕವಾಗಿ ಅಥವಾ ಆರ್ಥಿಕವಾಗಿ ಇರಬಹುದು. ಆದರೆ ಆ ಮನಸ್ಥಿತಿ ಇದ್ದಲ್ಲಿ ಮಾತ್ರ ನಾವು ಸಮಾಜದ ಆಸ್ತಿಯಾಗುವುದು ಸಾಧ್ಯವಾಗುತ್ತದೆ. ಹಾಗಾಗಿ ಎಂ.ಎಸ್.ಆರ್.ಎಸ್ ಕಾಲೇಜಿನ ಎಲ್ಲ ಹಳೆ ವಿದ್ಯಾರ್ಥಿಗಳು ಪ್ರಪಂಚದಲ್ಲಿ ಎಲ್ಲೇ ಇದ್ದರೂ ಈ ಕಾಲೇಜಿನ ಶ್ರೇಯೋಭಿವೃದ್ಧಿಯಲ್ಲಿ ಒಂದಾಗಬೇಕು ಎಂದು ಮನವಿ ಮಾಡಿದರು.

ತಾ॥ 09–02–2020 ರಂದು ಮುಂಬೈನಲ್ಲಿ ವಿಶ್ವಮಟ್ಟದ ವಿದ್ಯಾರ್ಥಿ ಸಮ್ಮಿಲನ ಏರ್ಪಡಿಸಲು ತೀರ್ಮಾನಿಸಿದ್ದು ವಿಶ್ವದೆಲ್ಲೆಡೆಯ ಹಳೆ ವಿದ್ಯಾರ್ಥಿಗಳು ಭಾಗಿಯಾಗಬೇಕೆಂದು ಕರೆಕೊಟ್ಟರು.

ಕಾರ್ಯಕ್ರಮವನ್ನು ಪಳ್ಳಿ ವಿಶ್ವನಾಥ್ ಶೆಟ್ಟಿ ಅಚ್ಚುಕಟ್ಟಾಗಿ ನಿರೂಪಿಸಿದರು. ಭವಾನಿಶಂಕರ್ ಶೆಟ್ಟಿ ಎಲ್ಲಾ ಮೇಲುಸ್ತುವಾರಿಯನ್ನು ನೋಡಿಕೊಂಡರು. ಗಾನ ಕೋಗಿಲೆ ಸುಧಾಕರ್ ಶೆಟ್ಟಿಯವರು ಮತ್ತು ಮಾಸ್ಟರ್ ಭುವನ್, ತಮ್ಮ ಮಧುರ ಕಂಠದ ಹಾಡುಗಳಿಂದ ನೆರೆದವರನ್ನು ರಂಜಿಸಿದರು.

# ವಿಶ್ವ ವಿಜ್ಞಾನಕ್ಕೆ ಭಾರತದ ಕೊಡುಗೆ

ವಾಸ್ತು ಮತ್ತು ಶಿಲ್ಪ ಕಲೆಗಳ ವಿಚಾರದಲ್ಲಿ ಇನ್ನೂ ಹಿಂದಿನ ಕಾಲದಲ್ಲಿ ಗಮನಿಸಿದರೆ 'ಸರಸ್ವತೀ ಸಂಸ್ಕೃತಿ' (ಹರಪ್ಪ ಮತ್ತು ಸಿಂಧೂ ಸಂಸ್ಕೃತಿಗಳೆಂದು ಇಂದು ಪ್ರಸಿದ್ಧವಾದವು)ಯ ಬಗ್ಗೆ ತಿಳಿಯುವುದು ಅನಿವಾರ್ಯವಾಗುತ್ತದೆ. ಪರಿಷ್ಕೃತವಾದ ಇಟ್ಟಿಗೆಗಳಿಂದ ಪ್ರಯೋಗಿಸಿ ನಿರ್ಮಿತವಾದ ವಾಸ್ತುಕಲೆಗಳು ದೃಷ್ಟಿಗೋಚರವಾಗುತ್ತವೆ. ಮಹೆಂಜದಾರೋವಿನ ಸಾರ್ವಜನಿಕ ಸ್ನಾನಗೃಹಗಳು 129 ಅಡಿ ಉದ್ದ ಮತ್ತು 39 ಅಡಿ ಅಗಲ ಹಾಗೂ 8 ಅಡಿ ಎತ್ತರವಿದೆ. ಸುಣ್ಣವನ್ನು ಬಳಿದು ಅದರ ಬಿರುಕುಗಳನ್ನು ತುಂಬಲಾಗಿದೆ. ಇದರಿಂದ ನೀರು ಒಳಸೇರಲು ಸಾಧ್ಯವೇ ಇಲ್ಲವಾಗಿದೆ.

ಮಹೆಂಜದಾರೋವಿನ ಒಳಚರಂಡಿಗಳ ವ್ಯವಸ್ಥೆಯೂ ಬಹಳ ಉತ್ತಮವಾಗಿದೆ. ಇದೇ ರೀತಿಯಾಗಿ, ಲೋಥಲ್‌ನ ಒಂಭತ್ತು ಜಹಜುಗಳ ನಿರ್ಮಾಣವೂ ಆಶ್ಚರ್ಯವುಂಟುಮಾಡುತ್ತದೆ. ಇದರ ಉದ್ದ ಸುಮಾರು 200 ಅಡಿಗಳು. ಈ ಸಂಸ್ಕೃತಿಯಲ್ಲಿ ದೊಡ್ಡನಗರಗಳಲ್ಲಿ ನಿರ್ಮಿಸಿರುವ ಧಾನ್ಯಗಳ ಕಣಜಗಳೂ ಆಶ್ಚರ್ಯವನ್ನುಂಟು ಮಾಡುತ್ತವೆ. ಈ ನಗರಗಳ ರಸ್ತೆಗಳ ನಿರ್ಮಾಣವೂ ಸಹ ತುಂಬ ವ್ಯವಸ್ಥಿತವಾಗಿತ್ತು.

ವೇದಗಳ ಯಜ್ಞಕ್ಕಾಗಿ ಚಿತಿಗಳ ಉಲ್ಲೇಖವಿದೆ. ಶ್ಯೇನಚಿತಿ, ರಥಚಕ್ರಾಕಾರಚಿತಿ, ತ್ರಿಕೋಣಚಿತಿ ಇತ್ಯಾದಿ ಅನೇಕ ರೀತಿಯ ಚಿತಿಗಳನ್ನು ನಾವು ಅಲ್ಲಿ ಕಾಣಬಹುದಾಗಿದೆ. ಆಕಾರ ಮತ್ತು ಇಟ್ಟಿಗೆಗಳ ಜೋಡಣೆಯು ಇವುಗಳಲ್ಲಿರುವ ವಿಶೇಷ. ಮತ್ತೊಂದು ವಿಶೇಷವೆಂದರೆ ಅವುಗಳ ವಿಸ್ತೀರ್ಣದ ಸಮಾನತೆ. ಯಾವುದೇ ಪ್ರಕಾರದ ಚಿತಿ ಇದ್ದರೂ ಅದರ ವಿಸ್ತೀರ್ಣವು ಒಂದೇ ಸಮನಾಗಿರುತ್ತದೆ. ಈ ವಿಚಾರವೂ ಸಹ ವಾಸ್ತು ಮತ್ತು ರೇಖಾಗಣಿತಗಳ ಪ್ರಗತಿಗಳ ದ್ಯೋತಕವಾಗಿರುತ್ತದೆ.

ಇವೆಲ್ಲವುಗಳಿಗಿಂತ ಮಿಗಿಲಾದುದೆಂದರೆ ನಮಗೆ ಮೌರ್ಯ ಸಾಮ್ರಾಟ ಅಶೋಕನ ಕಾಲದ ಚುನಾರ ಕಲ್ಲಿನಿಂದ ಕೆತ್ತಲ್ಪಟ್ಟ ಸ್ತಂಭಗಳು. ಅವುಗಳ ಹಿಂಬದಿಯಂತೂ ಕನ್ನಡಿಯಂತೆ ನಮ್ಮ ಮುಖಗಳನ್ನು ಪ್ರತಿಬಿಂಬಿಸುತ್ತವೆ. ಸಾರನಾಥದ ಧಮ್ಮೇಖ ಸ್ತೂಪ ಮತ್ತು ಸಾಂಚಿಯ ವಿಶಾಲ ಸ್ತೂಪವೂ ಇದೇ ಕಾಲದ್ದಾಗಿದೆ ಮತ್ತು ಭಾರತದ ವಾಸ್ತುಕಲೆ ಮತ್ತು ರೇಖಾಗಣಿತಗಳ ಪ್ರಗತಿಯ ಪ್ರತೀಕಗಳಾಗಿವೆ. ಇವುಗಳಲ್ಲೇ ಇನ್ನೊಂದು ಆಶ್ಚರ್ಯಕರ ಉದಾಹರಣೆಯೆಂದರೆ ಗುಜರಾತಿನಲ್ಲಿ ನಿರ್ಮಿತವಾದ ಸುದರ್ಶನ ಸರೋವರ. ಈ ಸರೋವರದ ಅಚ್ಚುಕಟ್ಟು ಮೌರ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವುದು. ಸುಮಾರು ಮುನ್ನೂರು ವರ್ಷಗಳ ನಂತರ ಕ್ಷತ್ರಪ ನಹಪಾನನು ಇದರ ಜೀರ್ಣೋದ್ಧಾರ ಮಾಡಿದ ನಂತರ ಪುನಃ ಉಪಯೋಗಿಸಲ್ಪಡುತ್ತಿದೆ. ಈ ಮೂವರು ರಾಜರುಗಳ ಶಾಸನಗಳಿಂದ ತಿಳಿದು-ಬರುವುದೇನೆಂದರೆ, ಈ ಅಚ್ಚುಕಟ್ಟು ಬಹುಶಃ ಒಂದು ಸಾವಿರ ವರ್ಷಗಳವರೆಗೆ ನೀರಿನ ಸರಬರಾಜಿಗೆ ಉಪಯುಕ್ತವಾಗಿತ್ತು. ವಿಶ್ವದಲ್ಲಿ ವಿಜ್ಞಾನ ಮತ್ತು ವಾಸ್ತುಶಿಲ್ಪಗಳ ಪ್ರಗತಿಗೆ ಇವುಗಳು ಅದ್ಭುತ ಉದಾಹರಣೆಗಳು.

**ಕೃಪೆ – ಸಂಸ್ಕೃತ ಭಾರತೀ**

## –: ಅಭಿನಂದನೆಗಳು :–



ನಮ್ಮ ಸಂಘದ ಸದಸ್ಯರಾದ ಚುಚ್ಚಿ **ನಾಗಯ್ಯ ಶೆಟ್ಟಿಯವರು** ಮಾಡಿದ ಸಮಾಜಮುಖಿ ಕಾರ್ಯಕ್ರಮಗಳನ್ನು ಪರಿಗಣಿಸಿ ಬೆಂಗಳೂರಿನ ಜಯ ಕರ್ನಾಟಕ ಸಂಘದ ಹೋಟೆಲ್ ವಿಭಾಗದ ವತಿಯಿಂದ ದಿನಾಂಕ 16.06.2019ರಂದು ವಿಜಯಾ ಬ್ಯಾಂಕ್ ಕಾಲೋನಿಯ ಮೂಲ್ಕಿ ಸುಂದರರಾಮ ಶೆಟ್ಟಿ ಸಭಾಂಗಣದಲ್ಲಿ ಸನ್ಮಾನಿಸಲಾಯಿತು.

# ACADEMIC EXCELLENCE

## *Congratulations!*

## PUC Achievers



**SHREYA U. S**
D/o Umesh Shetty & Shailaja U. Shetty
PUC (Sc.)- 91%
ICIBO Mahesh PU College
VR Pura, Bangalore



**VRISHIKA PRABHAKAR SHETTY**
D/o Prabhakar Shetty & Bina Shetty
PUC (Sc.)- 96.33%, Statistics - 100
State 19th Rank
St. Joseph Indian PU College, Bangalore

# ಜಾಗತಿಕ ಬಂಟರ ಸಂಘಗಳ ಒಕ್ಕೂಟದಿಂದ 33 ಫಲಾನುಭವಿಗಳಿಗೆ ಪರಿಹಾರ ಧನ ವಿತರಣೆ

**ಮಂಗಳೂರು:** ಜಾಗತಿಕ ಬಂಟರ ಸಂಘಗಳ ಒಕ್ಕೂಟದಿಂದ ಮೂವತ್ತಮೂರು ಮಂದಿ ಫಲಾನುಭವಿಗಳಿಗೆ ಸುಮಾರು 10 ಲಕ್ಷಕ್ಕೂ ಮಿಕ್ಕಿದ ಪರಿಹಾರ ಧನವನ್ನು ಬಂಟ್ಸ್ ಹಾಸ್ಟೆಲ್ ಬಳಿ ಇರುವ ಅಮೃತೋತ್ಸವ ಕಟ್ಟಡದಲ್ಲಿರುವ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಕಛೇರಿಯಲ್ಲಿ ಹಸ್ತಾಂತರಿಸಲಾಯಿತು.

ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ಅವರು 8 ಮಂದಿ ಮನೆಯ ಫಲಾನುಭವಿಗಳಿಗೆ, 14 ಮಂದಿಗೆ ವೈದ್ಯಕೀಯ ಚಿಕಿತ್ಸೆಗೆ, 1 ಮದುವೆಗೆ ಸಹಾಯಧನದ ಚೆಕ್‌ಗಳನ್ನು ವಿತರಿಸಿದರು. ಕಳೆದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ಸಹಜ್ ಆಳ್ವ, ಸಮೀಕ್ಷಾ ಶೆಟ್ಟಿ, ದೇವಿಕಾ ಸಂತೋಷ್ ರೈ ಕುಮಟಾ, ಕಾರ್ತಿಕ್ ಶೆಟ್ಟಿ, ಪ್ರಜೀತ್ ಶೆಟ್ಟಿ, ಶಮಿತಾ ಎಸ್ ಹೆಗ್ಡೆ, ಐಶ್ವರ್ಯ ಎಂ. ಶೆಟ್ಟಿ, ಪ್ರತೀತಾ ಪಿ ಶೆಟ್ಟಿ ಮತ್ತು ಸಿಂಚನಾ ಶೆಟ್ಟಿ ಅವರಿಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಧನ ನೀಡಿ ಸಮಾರಂಭದಲ್ಲಿ ಗೌರವಿಸಲಾಯಿತು. ಥ್ಯಾಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ಜುಲೈ 20 ರಿಂದ ಜುಲೈ 30 ರವರೆಗೆ ನಡೆಯಲಿರುವ ಐಎಂಎಫ್‌ಎ ಸೀನಿಯರ್ ವರ್ಲ್ಡ್ ಮೈತ್ಯಾ ಚಾಂಪಿಯನ್ ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಲು ಆಯ್ಕೆಯಾದ ಅನ್ವಿತಾ ಆಳ್ವ ಸುರತ್ಕಲ್ ಅವರಿಗೆ 25 ಸಾವಿರ ರೂಪಾಯಿ ಆರ್ಥಿಕ ನೆರವು ನೀಡಿ ಯಶಸ್ಸಿಗಾಗಿ ಶುಭ ಕೋರಲಾಯಿತು.

## ಅಭಿನಂದನೆಗಳು



ಸಿಎ. ಚಂದ್ರಶೇಖರ್ ಶೆಟ್ಟಿ



ಸಿಎ. ಚಂದನ್ ಕುಮಾರ್ ಹೆಗ್ಡೆ



ಸಿಎ. ಸುನೀಲ್ ಭಂಡಾರಿ

ಕರ್ನಾಟಕ ರಾಜ್ಯ ಸನ್ನದು ಲೆಕ್ಕಪರಿಶೋಧಕರ ಸಂಘದಲ್ಲಿ ನಡೆದ 2019–20ನೇ ಸಾಲಿನ ಚುನಾವಣೆಯಲ್ಲಿ ನಮ್ಮ ಸಂಘದ ಸದಸ್ಯರುಗಳಾದ ಶ್ರೀ ಚಂದ್ರಶೇಖರ್ ಶೆಟ್ಟಿ ಅಧ್ಯಕ್ಷರಾಗಿ, ಶ್ರೀ ಚಂದನ್ ಕುಮಾರ್ ಹೆಗ್ಡೆ ಕಾರ್ಯದರ್ಶಿಯಾಗಿ ಹಾಗೂ ಶ್ರೀ ಸುನೀಲ್ ಭಂಡಾರಿಯವರು, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ. ಕರ್ನಾಟಕ ರಾಜ್ಯ ಸನ್ನದು ಲೆಕ್ಕಪರಿಶೋಧಕರ ಸಂಘದ ನೂತನ ಆಡಳಿತ ಮಂಡಳಿಗೆ ಆಯ್ಕೆಯಾದ ಸದಸ್ಯರುಗಳಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# WORLD BUNTS FOUNDATION TRUST (Regd)

7th Floor, Ram Bhavan Complex, Kodialbail, Mangalore- 575003 Tel : 0824-2424205

World Bunts Foundation Trust ®, Mangalore, invites application on Merit cum Means basis, from eligible students for Education Loan and Education Scholarship for the year 2019-2020.

**I) Educational Loan (Fresh) :- Medical, Dental, B Pharma/D Pharma (all professional courses namely- Allopathic and AYUSH courses) Nursing/Para medical discipline, fisheries/Agriculture, Veterinary, Engineering and 5 years Law Course from National Law colleges**

**Eligibility:**

A) Engineering : Through CET. Karnataka CET Ranking : Candidates securing seat under government Quota(in government and private colleges) are only eligible.

B) Medical and other allied activities - through All India NEET/CET Examination. Government seat (merit) in Government and private colleges are only eligible

C) Engineering lateral entry: Students who have secured admission to Engineering after Diploma (Lateral) through Karnataka CET. Only Government seats(merit) in Government and private colleges are only eligible

D) Students secured admission through EEE/JEE/NATA are also eligible to apply.

E) Agriculture, Fisheries/Veterinary- CET/NEET Ranking

F) Law Courses: Students who have secured rank in the CET conducted by the National college for Law

* Seats under payment seat are not eligible.

Application for fresh Education loan – go to our website to download Application Forms for Education Loan

Duly filled in applications along with the attested copies of the documents, mentioned on the application should be sent to the office of the Trust on or before 30.09.2019 (Application received thereafter will not be considered). For further details contact office of the Trust. Phone. No.0824-2424205.

**II) Renewal of Education loan availed in the previous years**

Students, who have availed Education loan in the previous years (from 2016-2017 to 2017-18 and 2018-2019) are eligible for current years installments. Request for 2nd, 3rd, and 4th year studies, be sent to the office of the Trust, along with duly attested photo copies of following documents.

1) Request Letter
2) Marks cards of applicable previous 2 semesters.
3) Fee paid receipt for the year 2019-2020
4) Study certificate issued by the college authority

**III) Educational Scholarship**

**(A) Fresh**

| Course | | Eligibility |
|---|---|---|
| 1. Polytechnic Diploma/ITI/BPED/B.Ed./D.Ed/JOC | : | Minimum 60% marks in qualifying Exams |

2. Post Graduation (M.A./M.Com/M.Sc.) : Minimum 70% marks in qualifying Exams

**(B) Renewal of Educational Scholarship availed in the previous years**

Students, who have availed Education Scholarship in the previous year (2017-2018 and 2018-19) are eligible for current years installments. Application for 2nd & 3rd year studies(wherever permissible) be sent to the office of the Trust, along with duly attested photo copies of following documents, duly mentioning previous Scholarship reference number.

1) Request Letter.
2) Marks cards of applicable previous 2 semesters.
3) Fee paid receipt for the year 2019-2020
4) Study certificate issued by the college authority.

Application for fresh Educational Scholarship may be down loaded from the website.

Duly filled in applicants along with the attested copies of the documents, mentioned on the application be sent to office of the Trust on before 30.09.2019. (Application received thereafter will not be considered)

**For further details contact office of the Trust. Ph. No.0824- 2424205.**

**K.M Shetty**
Secretary

## ಅಭಿನಂದನೆಗಳು



**ಎನ್. ಸಮೀಕ್ಷಾ ರೈ**

ಆರ್. ವಿ ಕಾಲೇಜ್ ಆಫ್ ಇಂಜಿನಿಯರಿಂಗ್ ನಡೆಸಿದ 2019ರ ಇಂಜಿನಿಯರಿಂಗ್ ಪದವಿ ಪರೀಕ್ಷೆಯಲ್ಲಿ (Electronics and Communication) ಎನ್. ಸಮೀಕ್ಷಾ ರೈಯವರು ಪ್ರಥಮ ರ್‍ಯಾಂಕ್ ಗಳಿಸುವ ಮೂಲಕ ಶ್ರೇಷ್ಠ ಸಾಧನೆಯನ್ನು ಮೆರೆದಿದ್ದಾರೆ. ಇವರು ಸಂಘದ ಸದಸ್ಯರಾದ ಶ್ರೀ ಪ್ರೇಮ್‌ಸಾಯಿ ರೈ ಮತ್ತು ಸುರೇಖಾ ರೈ ದಂಪತಿಗಳ ಪುತ್ರಿ ಹಾಗೂ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ದರ್ಬೆ ಚಂದ್ರಹಾಸ್ ರೈಯವರ ಸೋದರ ಸೊಸೆ. ಬಂಟರ ಸಂಘ ಇವರನ್ನು ಅಭಿನಂದಿಸುವುದರೊಂದಿಗೆ ಉಜ್ವಲ ಭವಿಷ್ಯವನ್ನು ಹಾರೈಸುತ್ತದೆ.

# WORLD BUNTS FOUNDATION TRUST (Regd)

7th Floor, Rambhavan Complex, Kodialbail, Mangalore- 575003 Tel : 0824-2424205

**World Bunts Foundation Trust ®, Mangalore is pleased to invite application for**

**1) Late Kothwalguthu Mechu Shedthi Memorial Endowment Fund – sponsored by Dr.S.S.Kaup**

"The Kothwal Scholarship" of Rs.25000/- Per year for either three years or four years of baccalaureate degree program to a student from a needy single female parent family.

The applicant should satisfy the following requirements to qualify for the award:

1. Should either be a son or daughter of a single female parent who bears the financial Burden to educate the child.
2. Comes from an indigent family and cannot afford the cost of college education.
3. Should show intense desire to enhance his/her knowledge by furthering college education.
4. He /She maintains "B" or 'second class' achievement level. In addition, if an applicant proven to be good in any extracurricular activity like music, sport or voluntary community service he/she will earn a bonus point toward his/her qualification over other applicants.
5. Will be awarded a scholarship of Rs.25,000/- per year for three years or four years.

It is incumbent on the recipient to maintain the intellectual excellence at the same rate as when he/she started in order to receive the scholarship for the following years.

**2) Late Kothwalguthu Nadumane Rathna Shedthi Memorial Charitable Fund – sponsored by Dr.S.S.Kaup**

"Kothwal Helping Hand" grant of Rs.10,000/- per year for two years to a needy single female parent family with high school or pre-college going children, and one who has shown willingness to work hard and/ or has a plan to improve her family economic condition.

The applicant should satisfy the following requirements to qualify for the award

1. Should be a single female parent with one or more children, pursuing high school or precollege education, and who has proven financial difficulties to provide education and/or has a business plan to improve the financial difficulties of the family.
2. Explaining how the funds would be used.
3. Will be awarded the "Kothwal Helping Hand grant" of Rs.10,000 for two years. At the end of first year, recipient should submit an account of previous years' activities in order to qualify for second year.

**For both scholarships,**

1) Applicant should send requests in one page letter to World Bunts Foundation Trust. The letter should contain all the details/ Information/commitments mentioned above with supporting evidence and/or commitments/documents.

2) For the academic year 2019-2020, inquiries should be sent to The World Bunts Foundation Trust.

Last date for receipt of application is 30.09.2019

**K.M Shetty**
Secretary

# ಬಂಟರ ಸಂಘ ಬೆಂಗಳೂರು – ಕ್ರೀಡಾ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ – 2019–20

ಆತ್ಮೀಯ ಸದಸ್ಯರೇ,

2019–20ನೇ ಸಾಲಿನ 'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ'ಕ್ಕೆ ತಮ್ಮೆಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ತಾವೆಲ್ಲರೂ ತಮ್ಮ ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾ ಕೂಟವನ್ನು ಕ್ರೀಡಾ ಮನೋಭಾವದೊಂದಿಗೆ ಯಶಸ್ವಿಗೊಳಿಸಬೇಕಾಗಿ ವಿನಂತಿ.

### ಕ್ರೀಡಾಕೂಟದ ವಿವರ

| | | | |
|---|---|---|---|
| ಅಕ್ಟೋಬರ್ 20 ಭಾನುವಾರ | ಕ್ರೀಡಾಜ್ಯೋತಿ ಮೆರವಣಿಗೆ, ಉದ್ಘಾಟನೆ ಮತ್ತು ಅಥ್ಲೆಟಿಕ್ಸ್ | ಬೆಳಿಗ್ಗೆ 8.00ಕ್ಕೆ | ಸಾಯಿ ಮೈದಾನ, ಬೆಂಗಳೂರು ಯೂನಿವರ್ಸಿಟಿ, ಬೆಂಗಳೂರು. |
| ನವೆಂಬರ್ 10 ಭಾನುವಾರ | ಶಟಲ್ ಬ್ಯಾಡ್ಮಿಂಟನ್ | ಬೆಳಿಗ್ಗೆ 8.00ಕ್ಕೆ | ಲೆಟ್ಸ್ ಪ್ಲೇ, ನಾಗರಬಾವಿ |
| ನವೆಂಬರ್ 17 ಭಾನುವಾರ | ಚೆಸ್, ಕೇರಂ, ಟೆನ್ನಿಕ್ವಾಟ್ ಹಾಗೂ ವಾಲಿಬಾಲ್ | ಬೆಳಿಗ್ಗೆ 9.00ಕ್ಕೆ | ಬೆಂಗಳೂರು ಬಂಟರ ಸಂಘದ ಸಂಕೀರ್ಣ |
| ನವೆಂಬರ್ 23 ಶನಿವಾರ | ಕಬಡ್ಡಿ ಪಂದ್ಯಾವಳಿ | ಬೆಳಿಗ್ಗೆ 8.00ಕ್ಕೆ | ಬೆಂಗಳೂರು ಬಂಟರ ಸಂಘದ ಸಂಕೀರ್ಣ |
| ಡಿಸೆಂಬರ್ 8 ಭಾನುವಾರ | ಕ್ರಿಕೆಟ್ | ಬೆಳಿಗ್ಗೆ 8.00ಕ್ಕೆ | ಬಿ.ಇ.ಎಲ್. ಮೈದಾನ, ಜಾಲಹಳ್ಳಿ |
| ಡಿಸೆಂಬರ್ 15 ಭಾನುವಾರ | ಕ್ರಿಕೆಟ್ | ಬೆಳಿಗ್ಗೆ 8.00ಕ್ಕೆ | ಬಿ.ಇ.ಎಲ್. ಮೈದಾನ, ಜಾಲಹಳ್ಳಿ |
| ಡಿಸೆಂಬರ್ 15 ಭಾನುವಾರ | ತ್ರೋಬಾಲ್ | ಬೆಳಿಗ್ಗೆ 10.00ಕ್ಕೆ | ಬಿ.ಇ.ಎಲ್. ಮೈದಾನ, ಜಾಲಹಳ್ಳಿ |

**ಮಧುಕರ ಎಂ. ಶೆಟ್ಟಿ**
ಗೌ|| ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

**ರಂಜಿತ್ ಶೆಟ್ಟಿ**
ಸಂಚಾಲಕರು, ಕ್ರೀಡಾ ಸಮಿತಿ – ಮೊ: 9731031061

**ರಾಧಾಕೃಷ್ಣ ಶೆಟ್ಟಿ**
ಚೇರ್‌ಮೆನ್, ಕ್ರೀಡಾ ಸಮಿತಿ – ಮೊ: 9731079797

**ಸೂಚನೆ:**
- **ಶಟಲ್ ಬ್ಯಾಡ್ಮಿಂಟನ್‌ಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 06.11.2019 ಬುಧವಾರ ಸಂಜೆ 5.30**
- **ವಾಲಿಬಾಲ್ ಹಾಗೂ ಕಬಡ್ಡಿ ಪಂದ್ಯಾವಳಿಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 26.10.2019 ಶನಿವಾರ ಸಂಜೆ 5.30**
- **ಕ್ರಿಕೆಟ್ ಹಾಗೂ ತ್ರೋಬಾಲ್‌ಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ: 23.11.2019 ಶನಿವಾರ ಸಂಜೆ 5.30**
- ಕಬಡ್ಡಿ ಪಂದ್ಯಾವಳಿಯಲ್ಲಿ ಬಂಟ ಸಮಾಜ ಬಾಂಧವರು ಭಾಗವಹಿಸಲು ಅರ್ಹರು.
- ಹೆಚ್ಚಿನ ವಿವರ ಮತ್ತು ನಿಯಮಾವಳಿಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

**ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಸಂಪರ್ಕಿಸಬಹುದು**

ಸುನೀಲ್ ಶೆಟ್ಟಿ 9886072580
ಸಂತೋಷ್ ಶೆಟ್ಟಿ ಬೇಲಾಡಿ 9663379394
ನಿತ್ಯರಂಜನ್ ಹೆಗ್ಡೆ 9945685277
ಪ್ರವೀಣ್‌ಕುಮಾರ್ ರೈ 9448461342
ರತನ್ ಶೆಟ್ಟಿ 9880882852
ರತ್ನಾಕರ ಶೆಟ್ಟಿ 9986404040
ರಾಜೇಶ್ ಶೆಟ್ಟಿ 9980028875
ಅಮೃತ್ ಶೆಟ್ಟಿ 9900246038
ಕುಶಾಲ ಶೆಟ್ಟಿ 9448018245
ಅಜಿತ್ ಶೆಟ್ಟಿ 9972064478
ಅಜಿತ್ ಶೆಟ್ಟಿ 9611385957
ಹರೀಶ್ ಶೆಟ್ಟಿ 9740002710
ದೀಪ್ ಶೆಟ್ಟಿ 8147702251
ರಾಜೀವ ಶೆಟ್ಟಿ 9738455484
ರಾಮಕೃಷ್ಣ ಶೆಟ್ಟಿ 9980225041
ಪ್ರಭಾಕರ ಶೆಟ್ಟಿ 9611100171
ಅನಿಲ್‌ಕುಮಾರ್ ಶೆಟ್ಟಿ 9880699831

## ಮಹಿಳಾ ವಿಭಾಗ

# ಗುಬ್ಬಿಗೂಡು – ಒಂದು ದಿನದ ಕಿರು ಪ್ರವಾಸ

ಬೆಂಗಳೂರು ಬಂಟರ ಸಂಘದ ಮಹಿಳಾ ವಿಭಾಗವು ದಿನಾಂಕ 24.07.2019ನೇ ಬುಧವಾರ ನೆಲಮಂಗಲದ ಹತ್ತಿರವಿರುವ "ಗುಬ್ಬಿಗೂಡು" ಎಂಬಲ್ಲಿಗೆ ಒಂದು ದಿನದ ಕಿರು ಪ್ರವಾಸವನ್ನು ಹಮ್ಮಿಕೊಂಡಿತ್ತು.




ಸುಮಾರು ಐವತ್ತಾರು ಮಂದಿ ಮಹಿಳೆಯರನ್ನೊಳಗೊಂಡ ತಂಡವು ಒಂದು ಬಸ್ಸು ಹಾಗೂ ಇನ್ನೊಂದು ಮಿನಿ ಬಸ್ಸಿನ ಮೂಲಕ ಗುಬ್ಬಿ ಗೂಡನ್ನು ತಲುಪಿದೆವು.

